**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/215/2016/ARE-13

Multi Storied Building,
Dr. B.R. Ambedkar Veedhi,
Bengaluru-560001
Date: 06th July, 2022.

# RECOMMENDATION

Sub: Departmental Inquiry against Shri G.M.Borkar, Tahsildar Grade-1, Honnavara Taluk (the then Tahsildar, Bhatkal Taluk)-reg.,

Ref: 1) Government Order No.ಆರ್‌ಡಿ 87 ಎಡಿಇ 2015, Bengaluru, dated: 21/06/2016 and 06/04/2017.

2) Nomination Order No.UPLOK-1/DE/215/2016, Bengaluru, dated: 28/06/2016 of Upalokayukta, State of Karnataka, Bengaluru.

3) Inquiry Report dated: 30/06/2022 of Additional Registrar of Enquiries-13, Karnataka Lokayukta, Bengaluru.

*****

The Government by its order dated: 21/06/2016 and 06/04/2017 initiated the disciplinary proceedings against Shri G.M.Borkar, Tahsildar Grade-1, Honnavara Taluk (the then Tahsildar, Bhatkal Taluk) (hereinafter referred to as Delinquent

Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/215/2016, Bengaluru, dated: 28/06/2016 nominated Additional Registrar of Enquiries-4, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No.UPLOK-1 & 2/DE/Transfers/2018, dated: 06/08/2018, the Additional Registrar of Enquiries-13, Karnataka Lokayukta, Bengaluru was re-nominated as Inquiry Officer to conduct Departmental Inquiry against DGO.

3. The DGO, Shri G.M.Borkar, Tahsildar Grade-1, Honnavara Taluk (the then Tahsildar, Bhatkal Taluk) was tried for the following charges:

**ಅನುಬಂಧ-1**

**ದೋಷಾರೋಪಣೆ**

ದಿನಾಂಕ: 09/08/2010 ರಂದು ಉಡುಪಿ ಜಿಲ್ಲೆಯ ಪೆರಂಪಳ್ಳಿ ಎಫ್.ಸಿ.ಐ., ಗೋದಾಮಿನಿಂದ ಸಂಜೆ 5.15ಕ್ಕೆ ಲಾರಿ ಸಂಖ್ಯೆ: ಕೆಎ 19/1669 ರಲ್ಲಿ 266 ಗೋಧಿ ದಾಸ್ತಾನನ್ನು ಬಿಡುಗಡೆ ಮಾಡಿದ್ದು, ಆ ದಾಸ್ತಾನನ್ನು ಮಂಗಳೂರಿಗೆ ಸಾಗಾಣಿಕೆ ಮಾಡುತ್ತಿದ್ದಾಗ ಉಡುಪಿ ಜಿಲ್ಲೆಯ ಕಾಪೂ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಲಾರಿಯನ್ನು ವಶಕ್ಕೆ ತೆಗೆದುಕೊಂಡು ಅಪರಾಧ ಸಂಖ್ಯೆ: 180/2010 ರಲ್ಲಿ ಪ್ರಕರಣವನ್ನು ನೋಂದಾಯಿಸಿಕೊಂಡು ಮಾಹಿತಿಯನ್ನು ಟಿ.ಎ.ಪಿ.ಸಿ.ಎಂ.ಎಸ್ ನಿಯಮಿತ, ಹೊನ್ನಾವರ ಕಚೇರಿಗೆ ನೀಡಿದ್ದು ಮತ್ತು ಆ ದಾಸ್ತಾನನ್ನು ಉಡುಪಿ ಜಿಲ್ಲೆಯ

ಪೆರಂಪಳ್ಳಿಯ ಎಫ್.ಸಿ.ಐ ಗೋದಾಮಿನಿಂದ ಟಿ.ಎ.ಪಿ.ಸಿ.ಎಂ.ಎಸ್, ಭಟ್ಕಳ, ಉತ್ತರ ಕನ್ನಡ ಜಿಲ್ಲೆಗೆ ಬಂದಿರದೇ ಇದ್ದರೂ ಸಹ ಮಧ್ಯಾಹ್ನ 1.35ಕ್ಕೆ ಲಾರಿ ಸಂಖ್ಯೆ: ಕೆ.ಎ 19/1669 ರಲ್ಲಿ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿ ದಾಸ್ತಾನು ಬಂದಿರುವುದಾಗಿ ದಾಸ್ತಾನು ಪುಸ್ತಕದಲ್ಲಿ ನಮೂದಿಸಿಕೊಂಡು ಸಬ್ಸಿಡಿ ಹಣವನ್ನು ಪಡೆಯಲಾಗಿದ್ದು, ಸದರಿ ಬ್ಯಾಗ್‌ಗಳು ಸ್ವೀಕೃತವಾಗದೇ ಇರುವ ಬಗ್ಗೆ ಅಂದಿನ **ಆಪಾದಿತ ಸರ್ಕಾರಿ ನೌಕರರಾದ ನೀವು ಶ್ರೀ. ಜಿ.ಎಂ. ಬೋರ್ಕರ್, ತಹಶೀಲ್ದಾರ್ ಗ್ರೇಡ್-1, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, (ಹಿಂದಿನ ತಹಶೀಲ್ದಾರ್, ಭಟ್ಕಳ ತಾಲ್ಲೂಕು)** ಆದ ನೀವು ಆಹಾರ ಇಲಾಖೆಯ ಮತ್ತು ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಗೋಧಿ ಬ್ಯಾಗ್‌ಗಳು ಸ್ವೀಕೃತವಾಗಿದೆ ಎಂದು ಹಣ ಪಾವತಿ ಮಾಡುವ ಮೂಲಕ ದುರ್ನಡತೆವೆಸಗಿರುತ್ತೀರಿ. ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966 ರ 3 (i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ.

4. The Inquiry Officer (Additional Registrar of Enquiries-13) on proper appreciation of oral and documentary evidence has held that, the Disciplinary Authority has 'Proved' the charges leveled against DGO, Shri G.M.Borkar, Tahsildar Grade-1, Honnavara Taluk (the then Tahsildar, Bhatkal Taluk).

5. On perusal of the Inquiry Report, in order to prove the guilt of the DGO, the Disciplinary Authority has examined two witnesses i.e., PW-1 and PW-2 and Ex. P-1 to P-12 documents were marked.

6. On re-consideration of Inquiry Report and taking note of the totality of the circumstances of the case, I do not find any reason

to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGO furnished by the Inquiry Officer, DGO, Shri G.M.Borkar has retired from service on 31/05/2018.

8. Having regard to the nature of charge 'Proved' against DGO, Shri G.M.Borkar, Tahsildar Grade-1, Honnavara Taluk (the then Tahsildar, Bhatkal Taluk) and on consideration of the totality of circumstances:-

> "It is hereby recommended to the Government to impose penalty of withholding 10% of pension payable to DGO, Shri G.M.Borkar, Tahsildar Grade-1, Honnavara Taluk (the then Tahsildar, Bhatkal Taluk) for a period of 5 years".

9. Action taken in the matter shall be intimated to this Authority.

Connected records are enclosed herewith.

06/7/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/215/2016/ಎಆರ್‌ಇ-13

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ:30/06/2022.

## ವಿಚಾರಣಾ ವರದಿ

**ಉಪಸ್ಥಿತರು:** **ಶೋಭಾ ಎಸ್,**
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:-** ಶ್ರೀ. ಜಿ.ಎಂ. ಬೋರ್ಕರ್, ತಹಶೀಲ್ದಾರ್ ಗ್ರೇಡ್-1, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ (ಹಿಂದಿನ ತಹಶೀಲ್ದಾರ್, ಭಟ್ಕಳ ತಾಲ್ಲೂಕು) ರವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:-** 1. ಕಂಪ್ಲೆಂಟ್/ಉಪಲೋಕ್/ಬಿಜಿಎಂ/346/2010 ಎ.ಆರ್.ಇ-6, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ : 27/07/2015.

2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 87 ಎಡಿಇ 2015, ಬೆಂಗಳೂರು, ದಿನಾಂಕ : 21/06/2016 ಮತ್ತು ದಿನಾಂಕ : 06/04/2017.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ ಡಿಇ/215/2016, ಬೆಂಗಳೂರು, ದಿನಾಂಕ: 28/06/2016.

* * * *

1. ದೂರುದಾರರಾದ ಶ್ರೀ. ಗೋಪಾಲ ಶಾಸ್ತ್ರಿ. ಪಿ, ಬೋರಿಮಾರ್ ಪೋಸ್ಟ್, ಮಾಣಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಜಿ.ಎಂ. ಬೋರ್ಕರ್, ತಹಶೀಲ್ದಾರ್ ಗ್ರೇಡ್-1, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ (ಹಿಂದಿನ ತಹಶೀಲ್ದಾರ್, ಭಟ್ಕಳ ತಾಲ್ಲೂಕು) ರವರ ವಿರುದ್ಧ ದೂರನ್ನು ಸಲ್ಲಿಸಿ, ಸದರಿ ದೂರಿನಲ್ಲಿ ದಿನಾಂಕ : 09/08/2010 ರಂದು ಉಡುಪಿ ಜಿಲ್ಲೆಯ ಪೆರಂಪಳ್ಳಿಯ ಎಫ್.ಸಿ.ಐ ಗೋದಾಮಿನಿಂದ ಕೃಷಿ ಹುಟ್ಟುವಳಿ ಸಹಕಾರಿ ಸಂಘ ನಿಯಮಿತ ಭಟ್ಕಳಗೆ ಹೋಗಬೇಕಾಗಿದ್ದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯ ಬದಲಾಗಿ 266 ಚೀಲ ಗೋಧಿಯನ್ನು ಲಾರಿ ನಂ.ಕೆ.ಎ 19/1699 ಅಕ್ರಮವಾಗಿ ತುಂಬಿ ಸಾಗಾಟ ಮಾಡುತ್ತಿದ್ದಾಗ ಅದೇ ದಿವಸ ಕಾಪು ಬಳಿ ಸದರಿ ಲಾರಿಯನ್ನು ವಶಕ್ಕೆ ಪಡೆದುಕೊಂಡು ಕಾಪು ಪೋಲೀಸ್ ಠಾಣೆ ಅಪರಾಧ ಸಂಖ್ಯೆ: 180/2010 ನೇದರಂತೆ ಪ್ರಕರಣ ದಾಖಲಿಸಿಕೊಂಡು ಸಂಬಂಧಪಟ್ಟರವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಶಾಖಾ ವ್ಯವಸ್ಥಾಪಕರು, ಕೃಷಿ ಹುಟ್ಟುವಳಿ ಸಹಕಾರಿ ಸಂಘ ನಿಯಮಿತ, ಭಟ್ಕಳ ಇವರು ದಿನಾಂಕ : 09/08/2010 ರಂದು ಲಾರಿ ನಂ.ಕೆ.ಎ.19/1669 ನೇದ್ದರಿಂದ, 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ಸ್ಟಾಕ್ ರಿಜಿಸ್ಟರ್‌ನಲ್ಲಿ ನಮೂದಿಸಿಕೊಂಡಿದ್ದು ಹಾಗೂ ಈ ಬಗ್ಗೆ ಸ್ಟಾಕ್ ರಿಜಿಸ್ಟರ್‌ನಲ್ಲಿ ಮೇಲೆ ಹೇಳಿದಂತಹ ಆಹಾರ ನಿರೀಕ್ಷಕರು, ಭಟ್ಕಳ ಇವರು ದೃಢೀಕರಿಸಿ ಈ ಬಗ್ಗೆ ಸರ್ಕಾರದಿಂದ ಬರತಕ್ಕ ಸಬ್ಸಿಡಿ ಹಣವನ್ನು ಪಡೆದುಕೊಂಡು ಅವ್ಯವಹಾರ ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1) ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ: 21/06/2016 ಮತ್ತು ದಿನಾಂಕ : 06/04/2017 ರ ಆದೇಶದಂತೆ, ಮಾನ್ಯ

ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ : 28/06/2016 ರಂದು ಅಪರ ನಿಬಂಧಕರು (ವಿಚಾರಣೆಗಳು-4) ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 10/08/2016 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

4. ಅಧಿಕೃತ ಜ್ಞಾಪನ ಸಂಖ್ಯೆ: ಉಪಲೋಕ್-1 & 2/ಡಿಇ/ವರ್ಗಾವಣೆ/2018, ದಿನಾಂಕ:06/08/2018 ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಆದೇಶದಂತೆ ಸದರಿ ಇಲಾಖಾ ವಿಚಾರಣೆಯನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರಿಂದ ಅಪರ ನಿಬಂಧಕರು (ವಿಚಾರಣೆಗಳು-13) ಶಾಖೆಗೆ ವರ್ಗಾವಣೆಗೊಂಡಿರುತ್ತದೆ.

## ಅನುಬಂಧ-1
## ದೋಷಾರೋಪಣೆ

5. ದಿನಾಂಕ: 09/08/2010 ರಂದು ಉಡುಪಿ ಜಿಲ್ಲೆಯ ಪೆರಂಪಳ್ಳಿ ಎಫ್.ಸಿ.ಐ., ಗೋದಾಮಿನಿಂದ ಸಂಜೆ 5.15ಕ್ಕೆ ಲಾರಿ ಸಂಖ್ಯೆ: ಕೆಎ 19/1669 ರಲ್ಲಿ 266 ಗೋಧಿ ದಾಸ್ತಾನನ್ನು ಬಿಡುಗಡೆ ಮಾಡಿದ್ದು, ಆ ದಾಸ್ತಾನನ್ನು ಮಂಗಳೂರಿಗೆ ಸಾಗಾಣಿಕೆ ಮಾಡುತ್ತಿದ್ದಾಗ ಉಡುಪಿ ಜಿಲ್ಲೆಯ ಕಾಪೂ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಲಾರಿಯನ್ನು

ವಶಕ್ಕೆ ತೆಗೆದುಕೊಂಡು ಅಪರಾಧ ಸಂಖ್ಯೆ: 180/2010 ರಲ್ಲಿ ಪ್ರಕರಣವನ್ನು ನೋಂದಾಯಿಸಿಕೊಂಡು ಮಾಹಿತಿಯನ್ನು ಟಿ.ಎ.ಪಿ.ಸಿ.ಎಂ.ಎಸ್ ನಿಯಮಿತ, ಹೊನ್ನಾವರ ಕಚೇರಿಗೆ ನೀಡಿದ್ದು ಮತ್ತು ಆ ದಾಸ್ತಾನನ್ನು ಉಡುಪಿ ಜಿಲ್ಲೆಯ ಪೆರಂಪಳ್ಳಿಯ ಎಫ್.ಸಿ.ಐ ಗೋದಾಮಿನಿಂದ ಟಿ.ಎ.ಪಿ.ಸಿ.ಎಂ.ಎಸ್, ಭಟ್ಕಳ, ಉತ್ತರ ಕನ್ನಡ ಜಿಲ್ಲೆಗೆ ಬಂದಿರದೇ ಇದ್ದರೂ ಸಹ ಮಧ್ಯಾಹ್ನ 1.35ಕ್ಕೆ ಲಾರಿ ಸಂಖ್ಯೆ: ಕೆ.ಎ 19/1669 ರಲ್ಲಿ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿ ದಾಸ್ತಾನು ಬಂದಿರುವುದಾಗಿ ದಾಸ್ತಾನು ಪುಸ್ತಕದಲ್ಲಿ ನಮೂದಿಸಿಕೊಂಡು ಸಬ್ಸಿಡಿ ಹಣವನ್ನು ಪಡೆಯಲಾಗಿದ್ದು, ಸದರಿ ಬ್ಯಾಗ್‌ಗಳು ಸ್ವೀಕೃತವಾಗದೇ ಇರುವ ಬಗ್ಗೆ ಅಂದಿನ **ಆಪಾದಿತ ಸರ್ಕಾರಿ ನೌಕರರಾದ ನೀವು ಶ್ರೀ. ಜಿ.ಎಂ. ಬೋರ್ಕರ್, ತಹಶೀಲ್ದಾರ್ ಗ್ರೇಡ್-1, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, (ಹಿಂದಿನ ತಹಶೀಲ್ದಾರ್, ಭಟ್ಕಳ ತಾಲ್ಲೂಕು)** ಆದ ನೀವು ಆಹಾರ ಇಲಾಖೆಯ ಮತ್ತು ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಗೋಧಿ ಬ್ಯಾಗ್‌ಗಳು ಸ್ವೀಕೃತವಾಗಿದೆ ಎಂದು ಹಣ ಪಾವತಿ ಮಾಡುವ ಮೂಲಕ ದುರ್ನಡತೆವೆಸಗಿರುತ್ತೀರಿ. ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966 ರ 3 (i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್ ಕಾಂಡೆಕ್ಟ್)

6. ಶ್ರೀ. ಗೋಪಾಲ ಶಾಸ್ತ್ರಿ. ಪಿ, ಬೋರಿಮಾರ್ ಪೋಸ್ಟ್, ಮಾಣಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಸಂಬೋಧಿಸಲಾಗುವ)

ರವರು ನಿಮ್ಮ ವಿರುದ್ಧ ದೂರನ್ನು ಈ ಸಂಸ್ಥೆಗೆ ಸಲ್ಲಿಸಿದ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

7. ದೂರುದಾರರು ತಮ್ಮ ದೂರಿನಲ್ಲಿ ದಿನಾಂಕ : 09/08/2010 ರಂದು ಉಡುಪಿ ಜಿಲ್ಲೆಯ ಪೆರಂಪಳ್ಳಿಯ ಎಫ್.ಸಿ.ಐ ಗೋದಾಮಿನಿಂದ ಕೃಷಿ ಹುಟ್ಟುವಳಿ ಸಹಕಾರಿ ಸಂಘ ನಿಯಮಿತ ಭಟ್ಕಳಗೆ ಹೋಗಬೇಕಾಗಿದ್ದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯ ಬದಲಾಗಿ 266 ಚೀಲ ಗೋಧಿಯನ್ನು ಲಾರಿ ನಂ. ಕೆ.ಎ 19/1699 ಅಕ್ರಮವಾಗಿ ತುಂಬಿ ಸಾಗಾಟ ಮಾಡುತ್ತಿದ್ದಾಗ ಅದೇ ದಿವಸ ಕಾಪು ಬಳಿ ಸದರಿ ಲಾರಿಯನ್ನು ವಶಕ್ಕೆ ಪಡೆದುಕೊಂಡು ಕಾಪು ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 180/2010 ನೇದರಂತೆ ಪ್ರಕರಣ ದಾಖಲಿಸಿಕೊಂಡು ಸಂಬಂಧಪಟ್ಟರವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಶಾಖಾ ವ್ಯವಸ್ಥಾಪಕರು, ಕೃಷಿ ಹುಟ್ಟುವಳಿ ಸಹಕಾರಿ ಸಂಘ ನಿಯಮಿತ, ಭಟ್ಕಳ ಇವರು ದಿನಾಂಕ: 09/08/2010 ರಂದು ಲಾರಿ ನಂ.ಕೆ.ಎ. 19/1669 ನೇದ್ದರಿಂದ, 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ಸ್ಟಾಕ್ ರಿಜಿಸ್ಟರ್‌ನಲ್ಲಿ ನಮೂದಿಸಿಕೊಂಡಿದ್ದು ಹಾಗೂ ಈ ಬಗ್ಗೆ ಸ್ಟಾಕ್ ರಿಜಿಸ್ಟರ್‌ನಲ್ಲಿ ಮೇಲೆ ಹೇಳಿದಂತಹ ಆಹಾರ ಧಾನ್ಯಗಳು ಸ್ವೀಕೃತಗೊಂಡಿರುವ ಬಗ್ಗೆ ಶಿರಸ್ತೇದಾರರ ಭಟ್ಕಳ ಹಾಗೂ ಆಹಾರ ನಿರೀಕ್ಷಕರು, ಭಟ್ಕಳ ಇವರು ದೃಢೀಕರಿಸಿ ಈ ಬಗ್ಗೆ ಸರ್ಕಾರದಿಂದ ಬರತಕ್ಕ ಸಬ್ಸಿಡಿ ಹಣವನ್ನು ಪಡೆದುಕೊಂಡು ಅವ್ಯವಹಾರ ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ.

8. ತದನಂತರ, ಮಾನ್ಯ ಉಪಲೋಕಾಯುಕ್ತರವರ ಆದೇಶದಂತೆ, ಪ್ರಕರಣವನ್ನು ತನಿಖೆಗಾಗಿ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಯಚೂರು, ಕಾರವಾರ ರವರಿಗೆ ವಹಿಸಲಾಗಿ, ಸದರಿಯವರು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಾರವಾರ ರವರಿಗೆ (ಇನ್ನು ಮುಂದೆ "ತನಿಖಾಧಿಕಾರಿಯವರು" ಎಂದು

ಕರೆಯಲ್ಪಡುವ) ರವರಿಗೆ ಪ್ರಕರಣವನ್ನು ತನಿಖೆಗಾಗಿ ವಹಿಸಿದ್ದು, ಸದರಿಯವರು ತಮ್ಮ ತನಿಖಾ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ, ಹೊನ್ನಾವರ ಕೃಷಿ ಹುಟ್ಟುವಳಿ ಸಹಕಾರ ಮಾರಾಟ ಸಂಘ ನಿಯಮಿತ, ಹೊನ್ನಾವರ ಶಾಖೆ, ಭಟ್ಕಳ ಕಚೇರಿಯಲ್ಲಿನ ಗೋಡೌನ ರಿಜಿಸ್ಟರ್‌ನ್ನು ಪರಿಶೀಲಿಸಲಾಗಿ ಆಗಿನ ಗೋಡೌನ ಕೀಪರ ಆದ ಶ್ರೀ ನಾಗಪ್ಪ ವೆಂಕಟಪ್ಪ ನಾಯ್ಕ ಇವರು ದಿನಾಂಕ: 09/08/2010 ರಂದು ಲಾರಿ ನಂ. ಕೆ.ಎ 19/1669 ನೇದ್ದರಿಂದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ನಮೂದಿಸಿದ್ದು ಕಂಡು ಬಂದಿದ್ದು ಹಾಗೂ ಸದರಿ ಅಂಕಿ ಸಂಖ್ಯೆಯಲ್ಲಿ ತಿದ್ದುಪಡಿ ಮಾಡಿರುವುದು ಕಂಡು ಬಂದಿರುತ್ತದೆ. ನಂತರ ಸಂಸ್ಥೆಯ ಸ್ಟಾಕ್ ರಿಜಿಸ್ಟರ್‌ನ್ನು ಪರಿಶೀಲಿಸಲಾಗಿ ಅಂದಿನ ಶಾಖಾ ವ್ಯವಸ್ಥಾಪಕರಾದ ಶ್ರೀ. ಎಂ.ಎಚ್ ಗೌಡ ರವರು ದಿನಾಂಕ: 09/08/2010 ರಂದು ಲಾರಿ ನಂ. ಕೆ.ಎ. 19/1669 ನೇದ್ದರಿಂದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ಸ್ಟಾಕ್ ರಿಜಿಸ್ಟರ್‌ನಲ್ಲಿ ನಮೂದಿಸಿರುವ ಬಗ್ಗೆ ಕಂಡು ಬಂದಿದ್ದು, ಸದರಿ ಶ್ರೀ. ನಾಗಪ್ಪ ನಾಯ್ಕ ಇವರು ಹಾಲಿ ಭಟ್ಕಳ ರಿಟೇಲ್ ಸೆಕ್ಷನ್ ಅಂಗಡಿ ಸಂಖ್ಯೆ: 28, 29 ಹಾಗೂ 31 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಟಿ.ಎ.ಪಿ.ಸಿ.ಎಂ.ಎಸ್.ಲಿ ಹೊನ್ನಾವರ ಸಂಸ್ಥೆಯವರು ಭಟ್ಕಳ ಶಾಖಾ ವ್ಯವಸ್ಥಾಪಕರಾದ ಶ್ರೀ. ವಿ.ಎಚ್. ಗೌಡ ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗಿರುತ್ತದೆ.

9. ಸದರಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಉಪ ನಿರ್ದೇಶಕರ ಕಚೇರಿ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಉತ್ತರ ಕನ್ನಡ, ಕಾರವಾರ ರವರ ಕಚೇರಿಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿದ್ದರಲ್ಲಿ ದಿನಾಂಕ: 09/08/2010 ರಂದು ಲಾರಿ ನಂ. ಕೆ.ಎ. 19/1669 ನೇದ್ದರಿಂದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಟಿ.ಎ.ಪಿ.ಸಿ.ಎಂ.ಎಸ್.ಲಿ, ಹೊನ್ನಾವರ ಶಾಖೆ: ಭಟ್ಕಳದಲ್ಲಿ ಸ್ವೀಕರಿಸಿ, ಆ ಬಗ್ಗೆ ಟಿ.ಎ.ಪಿ.ಸಿ.ಎಂ.ಎಸ್.ಲಿ, ಹೊನ್ನಾವರ ಶಾಖೆ: ಭಟ್ಕಳ ರವರಿಗೆ

ಸರ್ಕಾರದಿಂದ ಸಬ್ಸಿಡಿ ಬಿಲ್ಲುಗಳನ್ನು ಮಂಜೂರಿಸಿರುವ ಬಗ್ಗೆ ತಿಳಿದು ಬಂದಿದ್ದು, ಸದರಿ ಬಿಲ್ಲುಗಳ ಮಂಜೂರಿಗಾಗಿ ಆಗಿನ ಭಟ್ಕಳ ತಾಲ್ಲೂಕು ತಹಶೀಲ್ದಾರ್ ರವರಾದ ನೀವು/ಆಪಾದಿತ ಸರ್ಕಾರಿ ನೌಕರರು/ಶ್ರೀ. ಜಿ.ಎಂ. ಬೋರ್ಕರ್ ಹಾಗೂ ಭಟ್ಕಳ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಉದಯ ಎಂ. ನಾಯಕ ಇವರು ಅನುಮೋದಿಸಿರುವುದು ಕಂಡು ಬಂದಿರುತ್ತದೆ. ಸದರಿ ಘಟನೆಗೆ ಸಂಬಂಧಿಸಿದಂತೆ ಮೇಲ್ಕಾಣಿಸಿದ ಆಹಾರ ಧಾನ್ಯಗಳು ದಿನಾಂಕ:09/08/2010 ರಂದು ಟಿ.ಎ.ಪಿ.ಸಿ.ಎಂ.ಎಸ್.ಲಿ., ಹೊನ್ನಾವರ ಶಾಖೆ, ಭಟ್ಕಳಕ್ಕೆ ಸ್ವೀಕೃತಗೊಳ್ಳದೇ ಇದ್ದರೂ ಹಾಗೂ ಈ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡರೂ ಸಹ ಜವಾಬ್ದಾರಿಯುತ ಅಧಿಕಾರಿಯಾದ ನೀವು/ಆಪಾದಿತ ಸರ್ಕಾರಿ ನೌಕರರು ಹಾಗೂ ಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀ ಉದಯ ಎಂ ನಾಯಕರವರು ಬಿಲ್ಲುಗಳ ಪಾವತಿಗಾಗಿ ತಮ್ಮ ಮೇಲಾಧಿಕಾರಿಯವರಿಗೆ ಅನುಮೋದನೆ ಮಾಡಿರುವುದು ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಬಗ್ಗೆ ಹಾಗೂ ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿಸಿರುವ ಬಗ್ಗೆ ಕಂಡು ಬಂದಿದ್ದು, ಸದರಿ ಆಹಾರ ಧಾನ್ಯಗಳ ಮೇಲೆ ಸಬ್ಸಿಡಿ ಬಿಲ್ಲುಗಳನ್ನು ಪಾವತಿಸಿರುತ್ತೀರಿ.

10. ಸದರಿ ಘಟನೆಗೆ ಸಂಬಂಧಿಸಿದಂತೆ ಪೋಲೀಸ್ ಉಪ ನಿರೀಕ್ಷಕರು, ಕಾಪು ಪೋಲೀಸ್ ಠಾಣೆ, ಉಡುಪಿ ಜಿಲ್ಲೆ ಇವರು ದಿನಾಂಕ: 08/11/2010 ರಂದು ಜಿಲ್ಲಾಧಿಕಾರಿಗಳು ಉತ್ತರ ಕನ್ನಡ ಜಿಲ್ಲೆ, ಕಾರವಾರ ಇವರಿಗೆ ವಿವರವಾದ ವರದಿಯನ್ನು ನೀಡಿದ್ದು, ಸದರಿ ವರದಿಯಲ್ಲಿ ಕಾಪು ಪೋಲೀಸ್ ಠಾಣೆ ಅಪರಾಧ ಸಂಖ್ಯೆ: 180/2020 ನೇದರ ಪ್ರಥಮ ವರ್ತಮಾನ ವರದಿ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿ ಕಳುಹಿಸಿಕೊಟ್ಟಿದ್ದು, ಸದರಿ ವರದಿಯನ್ನಾಧರಿಸಿ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ ಇವರು ಕೈಗೊಂಡಿರುವ ಕ್ರಮದ ಬಗ್ಗೆ ಕಾರವಾರ ಜಿಲ್ಲಾಧಿಕಾರಿಯವರಲ್ಲಿ ಪತ್ರ ಮೂಲಕ ಕೋರಿಕೊಳ್ಳಲಾಗಿ ಈ ಬಗ್ಗೆ ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಇಲಾಖೆ, ಉತ್ತರ ಕನ್ನಡ, ಕಾರವಾರ ಇವರು ಕಚೇರಿ ಪತ್ರ ಸಂಖ್ಯೆ: ಎಸ್‌ಯುಪಿ/ಡಿಆರ್‌ಎ/ವಿವ-30/2011-12 ದಿನಾಂಕ : 23/03/2015 ನೇದರಂತೆ ವರದಿಯನ್ನು ನೀಡಿದ್ದು, ಸದರಿ ವರದಿಯಲ್ಲಿ ಕಾಪು ಪೊಲೀಸ್ ಠಾಣೆ ಅಪರಾಧ ಸಂಖ್ಯೆ:180/2010 ನೇದಕ್ಕೆ ಸಂಬಂಧಿಸಿದಂತೆ ಆಗಿನ ಉಪ ನಿರ್ದೇಶಕರು, ಟಿ.ಎ.ಪಿ.ಸಿ.ಎಂ.ಎಸ್.ಟಿ ಹೊನ್ನಾವರ ಶಾಖೆ, ಭಟ್ಕಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅಗತ್ಯ ದಾಖಲೆಗಳೊಂದಿಗೆ ವಿವರವಾದ ವರದಿಯನ್ನು ಆಯುಕ್ತರು, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

11. ಆದರೆ ಅಂದಿನ ಉಪ ನಿರ್ದೇಶಕರಾದ ಶ್ರೀ. ಹೆಚ್. ರತ್ನಾಕರ ನಾಯ್ಕ, ಇವರು ಸದರಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಸರಿಯಾದ ತನಿಖೆ ಕೈಗೊಳ್ಳದೇ ಸದರಿ ಆಹಾರ ಧಾನ್ಯಗಳ ಮೇಲೆ ಸಬ್ಸಿಡಿ ಬಿಲ್ಲುಗಳನ್ನು ಮಂಜೂರಾದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ವಿಫಲರಾಗಿರುವ ಬಗ್ಗೆ ಕಂಡು ಬಂದಿರುತ್ತದೆ ಎಂದು ತಿಳಿಸಿದ್ದು, ಸದರಿ ದೂರು ಅರ್ಜಿ ವಿಚಾರಣೆಯಿಂದ ತಿಳಿದುಬಂದಿರುವುದೇನೆಂದರೆ ಶ್ರೀ. ಜಿ.ಎಂ. ಬೋರ್ಕರ್, ತಹಶೀಲ್ದಾರ್, ಭಟ್ಕಳ ಅಂದರೆ ನೀವು-ಆಪಾದಿತ ಸರ್ಕಾರಿ ನೌಕರರು ಕರ್ತವ್ಯ ಲೋಪವೆಸಗಿರುತ್ತಾರೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

12. ಫಿರ್ಯಾದಿದಾರರು ಸಲ್ಲಿಸಿದ ದೂರಿನ ಮೇಲೆ, ತನಿಖಾಧಿಕಾರಿಯವರ ವರದಿಯ ಮೇಲೆ ಹಾಗೂ ಕಡತದಲ್ಲಿ ಮಂಡಿಸಲಾದ ಅಂಶಗಳ ಮೇಲೆ ನಿಮ್ಮ ಆಕ್ಷೇಪಣೆಯನ್ನು ಕೇಳಲಾಗಿ, ನೀವು, ನಿಯಮಾನುಸಾರ ಬಂದಂತಹ ಅಕ್ಕಿ-ಗೋಧಿಗಳನ್ನು ಪರಿಶೀಲಿಸಿ, ಆಹಾರ ನಿರೀಕ್ಷಕ/ಆಹಾರ ಶಿರಸ್ತೇದಾರ, ಸಂಬಂಧಪಟ್ಟ ಚಾರ್ಜನಲ್ಲಿರುವ ಸಹಾಯಕರು ಸರಕುಗಳನ್ನು ಪರಿಶೀಲಿಸಿ, ಸ್ವೀಕರಿಸಿರುವುದರಿಂದ ಕಾಪು ಬಳಿ ಪೊಲೀಸರು ವಶಪಡಿಸಿಕೊಂಡ 266 ಚೀಲ ಗೋಧಿ ಹಾಗೂ ಭಟ್ಕಳ ಆಹಾರ ನಿಗಮಕ್ಕೆ ಪೂರೈಸಿದ ಸರಕುಗಳಿಗೆ ಅಜಗಜಾಂತರ

ವ್ಯತ್ಯಾಸವಿದ್ದು, ಹಾಗೂ ಸದರಿ ಸಗಟನ್ನು ಸ್ವೀಕರಿಸಿದ ನಂತರ ಅದರ ಸಬ್ಸಿಡಿ ಬಗ್ಗೆ ಸರಕಾರಕ್ಕೆ ವರದಿ ಸಲ್ಲಿಸಿದ್ದು, ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಂಡಿದ್ದು ಇರುತ್ತದೆಯೇ ವಿನ: ಇದರಲ್ಲಿ ಯಾವುದೇ ಹಸ್ತಕ್ಷೇಪ ಇರುವುದಿಲ್ಲವೆಂದು ಯಾವುದೇ ಅಪರಾಧ ಎಸಗಿರುವುದಿಲ್ಲ ಎಂದು ತಿಳಿಸಿ ಪ್ರಕರಣವನ್ನು ಮುಕ್ತಾಯ ಮಾಡಲು ಕೋರಿರುತ್ತೀರಿ.

13. ದೂರುದಾರರು ಸಲ್ಲಿಸಿರುವ ದೂರಿನ ಅಂಶಗಳು, ತನಿಖಾಧಿಕಾರಿಯವರು ಸಲ್ಲಿಸಿದ ವರದಿ, ನೀವು ಸಲ್ಲಿಸಿದ ತಕರಾರುಗಳನ್ನು ಪರಿಶೀಲಿಸಿದಾಗ ನೀವು ಕರ್ತವ್ಯ ಲೋಪ ಮಾಡಿದ್ದಕ್ಕೆ ಮೇಲ್ನೋಟಕ್ಕೆ ಪುರಾವೆ ಲಭ್ಯವಿದೆ, ಆದ ಕಾರಣ, ನಿಮ್ಮ ವಿರುದ್ಧ ನಡವಳಿಯನ್ನು ಕೈ ಬಿಡಲು ಸಾಧ್ಯವಾಗಿರುವುದಿಲ್ಲ.

14. ಈ ಮೇಲ್ಕಂಡ ವಿಚಾರಗಳನ್ನು ಪರಿಶೀಲಿಸಿದಾಗ, ನೀವು-ಆಪಾದಿತ ಸರ್ಕಾರಿ ನೌಕರರು, ಸಾರ್ವಜನಿಕ ನೌಕರರಾಗಿ ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೇ, ಕರ್ತವ್ಯ ಲೋಪ ಎಸಗಿ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತೀರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

15. ಈ ಮೇಲ್ಕಂಡ ಕಾರಣಗಳಿಂದಾಗಿ, ಆಪಾದಿತ ಸರ್ಕಾರಿ ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರೆಯುವುದು ಅಗತ್ಯ ಎಂದು ಮೇಲ್ನೋಟಕ್ಕೆ ಕಂಡುಬಂದಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಸಾಕ್ಷ್ಯದ ಆಧಾರಗಳಿಂದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ 3(1)(i) ರಿಂದ (iii) ರಲ್ಲಿ ಹೇಳಿದಂತೆ

ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಆಪಾದಿತ ಸರ್ಕಾರಿ ನೌಕರರಾದ ನಿಮ್ಮ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಶಿಸ್ತು ಪ್ರಾಧಿಕಾರವು ಉಲ್ಲೇಖ (1) ರಂತೆ ಈ ಸಂಸ್ಥೆಯಿಂದ ವಿಚಾರಣೆ ಮಾಡಲು ಕೋರಲಾಗಿರುವ ಕಾರಣ ನಿಮ್ಮಗಳ ವಿರುದ್ಧ ಈ ಆಪಾದನೆ.

16. ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ : 17/03/2021 ರಂದು ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಹೇಳಿಕೆಯನ್ನು ಪಡೆಯಲಾಯಿತು. ಆ.ಸ.ನೌ ರವರು ದಿನಾಂಕ : 03/01/2019 ರಂದು ತಮ್ಮ ಪರವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಅದರಲ್ಲಿ ದೋಷಾರೋಪಣೆಯಲ್ಲಿ ಮಾಡಿದ ಆಪಾದನೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ಆ.ಸ.ನೌ ರವರು ಮುಂದುವರೆದು ದಿನಾಂಕ : 09/08/2010 ರಂದು ಉಡುಪಿ ಜಿಲ್ಲೆಯ ಪೆರಂಪಳ್ಳಿಯ ಎಫ್.ಸಿ.ಐ., ಗೋದಾಮಿನಿಂದ ಸಂಜೆ 5.15ಕ್ಕೆ ಲಾರಿ ಸಂಖ್ಯೆ: ಕೆಎ 19/1669 ರಲ್ಲಿ 266 ಚೀಲ ಗೋಧಿ ದಾಸ್ತಾನನ್ನು ಬಿಡುಗಡೆ ಮಾಡಿದ್ದು, ಆ ದಾಸ್ತಾನನ್ನು ಮಂಗಳೂರಿಗೆ ಸಾಗಾಣಿಕೆ ಮಾಡುತ್ತಿದ್ದಾಗ ಉಡುಪಿ ಜಿಲ್ಲೆಯ ಕಾಪೂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಲಾರಿಯನ್ನು ವಶಕ್ಕೆ ತೆಗೆದುಕೊಂಡು ಅಪರಾಧ ಸಂಖ್ಯೆ:180/2010 ರಲ್ಲಿ ಪ್ರಕರಣವನ್ನು ನೋಂದಾಯಿಸಿಕೊಂಡು ಮಾಹಿತಿಯನ್ನು ಟಿ.ಎ.ಪಿ.ಸಿ.ಎಂ.ಎಸ್ ನಿಯಮಿತ, ಹೊನ್ನಾವರ ಕಚೇರಿಗೆ ನೀಡಿದ್ದು ಮತ್ತು ಆ ದಾಸ್ತಾನನ್ನು ಉಡುಪಿ ಜಿಲ್ಲೆಯ ಪೆರಂಪಳ್ಳಿಯ ಎಫ್.ಸಿ.ಐ

ಗೋದಾಮಿನಿಂದ ಟಿ.ಎ.ಪಿ.ಸಿ.ಎಂ.ಎಸ್, ಭಟ್ಕಳ, ಉತ್ತರ ಕನ್ನಡ ಜಿಲ್ಲೆಗೆ ಬಂದಿರದೇ ಇದ್ದರೂ ಸಹ ಮಧ್ಯಾಹ್ನ 1.35ಕ್ಕೆ ಲಾರಿ ಸಂಖ್ಯೆ: ಕೆ.ಎ. 19/1669 ರಲ್ಲಿ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿ ದಾಸ್ತಾನು ಬಂದಿರುವುದಾಗಿ ದಾಸ್ತಾನು ಪುಸ್ತಕದಲ್ಲಿ ನಮೂದಿಸಿಕೊಂಡು ಸಬ್ಸಿಡಿ ಹಣವನ್ನು ಪಡೆಯಲಾಗಿದ್ದು, ಸದರಿ ಬ್ಯಾಗ್‌ಗಳು ಸ್ವೀಕೃತವಾಗದೇ ಇರುವ ಬಗ್ಗೆ ಆ.ಸ.ನೌ ರವರು ಆಹಾರ ಇಲಾಖೆಯ ಮತ್ತು ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಗೋಧಿ ಬ್ಯಾಗ್‌ಗಳು ಸ್ವೀಕೃತವಾಗಿದೆ ಎಂದು ಹಣ ಪಾವತಿ ಮಾಡುವ ಮೂಲಕ ದುರ್ನಡತೆವೆಸಗಿರುವುದಾಗಿ ಆಪಾದಿಸಿದ್ದು, ತಾನು ಎಂದೂ ದಾಸ್ತಾನು ಪುಸ್ತಕದಲ್ಲಿ 82 ಚೀಲ ಅಕ್ಕಿ, 186 ಚೀಲ ಗೋಧಿ ಬರದಿದ್ದರೂ ಅವುಗಳು ಟಿ.ಎ.ಪಿ.ಸಿ.ಎಂ.ಎಸ್ ನಿಯಮಿತ ಶಾಖೆಯಲ್ಲಿ ಸ್ವೀಕೃತವಾಗಿವೆ ಎಂದು ನಮೂದಿಸಿರುವುದಿಲ್ಲ, ಅದೂ ಅಲ್ಲದೇ ದಿನಾಂಕ : 02/09/2016 ರಂದು ಕೆಎಟಿ ರವರು ಸರ್ಕಾರದ ಆದೇಶವನ್ನು ರದ್ದುಗೊಳಿಸಿ ಕಲಂ 12(3) ರ ವರದಿಯನ್ನು ಮರು ಪರಿಶೀಲಿಸಬೇಕೆಂದು ಆದೇಶಿಸಿರುತ್ತಾರೆ. ಆ ಕಾರಣದಿಂದ ಈ ಪ್ರಾಧಿಕಾರವು ತನ್ನ ಮೇಲೆ ವಿಚಾರಣೆ ಮಾಡಲು ಅವಕಾಶವಿರುವುದಿಲ್ಲವಾದ್ದರಿಂದ ತನ್ನನ್ನು ವಿಚಾರಣೆಯಿಂದ ಕೈಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ. ದೂರುದಾರರು ಮಾಡಿರುವ ದೂರನ್ನು ಮುಕ್ತಾಯ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

17. ಈ ವಿಚಾರಣೆಯಲ್ಲಿ, ಆ.ಸ.ನೌ ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಶ್ರೀ. ಗೋಪಾಲ ಶಾಸ್ತ್ರಿ. ಪಿ, ದೂರುದಾರರು ರವರನ್ನು ಪಿ.ಡಬ್ಲ್ಯೂ-1 ಎಂದು ಶ್ರೀಮತಿ. ಉಮಾ ಪ್ರಶಾಂತ್ ತನಿಖಾಧಿಕಾರಿ ರವರನ್ನು ಪಿ.ಡಬ್ಲ್ಯೂ-2 ಎಂದು ಸಾಕ್ಷಿ ನುಡಿಸಿಕೊಂಡು ನಿಶಾನೆ ಪಿ-1 ರಿಂದ ನಿಶಾನೆ ಪಿ-12 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

ತದನಂತರ, ಆ.ಸ.ನೌ ರವರುಗಳ ದ್ವಿತೀಯ ಮೌಖಿಕ ಹೇಳಿಕೆ (Second Oral Statement) ಯನ್ನು ದಿನಾಂಕ : 15/03/2022 ರಂದು ಪಡೆದುಕೊಳ್ಳಲಾಗಿರುತ್ತದೆ.

18. ಆ.ಸ.ನೌ ರವರು ತಮ್ಮ ಪರವಾಗಿ ಯಾವುದೇ ಸಾಕ್ಷಿಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

19. ಮಂಡನಾಧಿಕಾರಿಯವರ ಮತ್ತು ಆ.ಸ.ನೌ ರವರ ಪರ ವಕೀಲರ ವಾದ ಆಲಿಸಿದೆ ಮತ್ತು ಆ.ಸ.ನೌ ರವರ ವಕೀಲರು ಸಲ್ಲಿಸಿರುವ ಲಿಖಿತ ವಾದವನ್ನು ಪರಿಶೀಲಿಸಿದೆ.

20. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?**

**ಅಂಶ-2: ಆದೇಶವೇನು?**

21. ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

22. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ-1) ಸಕಾರಾತ್ಮಕವಾಗಿದೆ.**

**ಅಂಶ-2) ಅಂತಿಮ ಆದೇಶದಂತೆ.**

# ಕಾರಣಗಳು

23. **ಅಂಶ-1** : ಈ ಪ್ರಕರಣದಲ್ಲಿ, ಆ.ಸ.ನೌ ರವರುಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಶ್ರೀ. ಗೋಪಾಲ ಶಾಸ್ತ್ರಿ. ಪಿ, ದೂರುದಾರರು ರವರನ್ನು ಪಿ.ಡಬ್ಲ್ಯೂ-1 ಎಂದು ಶ್ರೀಮತಿ. ಉಮಾ ಪ್ರಶಾಂತ್, ತನಿಖಾಧಿಕಾರಿ ರವರನ್ನು ಪಿ.ಡಬ್ಲ್ಯೂ-2 ಎಂದು ಸಾಕ್ಷಿ ನುಡಿಸಿಕೊಂಡು ನಿಶಾನೆ ಪಿ-1 ರಿಂದ ನಿಶಾನೆ ಪಿ-12 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

24. ಪಿ.ಡಬ್ಲ್ಯೂ-1/ಶ್ರೀ. ಗೋಪಾಲಶಾಸ್ತ್ರಿ ರವರ ಮುಖ್ಯ ವಿಚಾರಣೆಯಲ್ಲಿ ದಿನಾಂಕ : 09/08/2010 ರಂದು ಲಾರಿ ಸಂಖ್ಯೆ: ಕೆ.ಎ-19/1669 ರಲ್ಲಿ ಸಂಜೆ ಸುಮಾರು 5.15ಕ್ಕೆ ಆಹಾರ ಧಾನ್ಯಗಳನ್ನು ಪಡಿತರ ವ್ಯವಸ್ಥೆಯಲ್ಲಿ ವಿತರಣೆ ಮಾಡುವುದಕ್ಕೋಸ್ಕರ ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ, ಪೆರಂಪಳ್ಳಿ ಶಾಖೆಯಿಂದ ಲೋಡ್ ಮಾಡಿಕೊಂಡು ಹೊರಟಿದ್ದು, ಸದರಿ ಲೋಡಿನಲ್ಲಿದ್ದ ಆಹಾರ ಧಾನ್ಯದ ಚೀಲಗಳು ಟಿ.ಎ.ಪಿ.ಸಿ.ಎಂ.ಎಸ್., ಭಟ್ಕಳ ಶಾಖೆಗೆ ಹೋಗಬೇಕಾಗಿದ್ದು, ಆದರೆ ಸದರಿ ಲೋಡ್ ಆದ ಲಾರಿಯು ಪೆರಂಪಳ್ಳಿಯಿಂದ ನೇರವಾಗಿ ಭಟ್ಕಳಕ್ಕೆ ಹೋಗುವ ಬದಲಾಗಿ, ಮಂಗಳೂರು ಮಾರ್ಗದಲ್ಲಿ ಹೊರಟಾಗ, ಕಾಪೂ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಸದರಿ ಲಾರಿಯನ್ನು ಅದೇ ದಿನ ಸಂಜೆ 5.40ಕ್ಕೆ ತಡೆದು, ಉಡುಪಿ ಆಹಾರ ನಿರೀಕ್ಷಕರು ಹಾಗೂ ಉಡುಪಿ ತಹಶೀಲ್ದಾರ್ ರವರು ಪೋಲೀಸರ ಸಹಾಯದಿಂದ ಚೆಕ್ ಮಾಡಲಾಗಿ, ಸದರಿ ಲಾರಿಯಲ್ಲಿದ್ದ ಆಹಾರ ಧಾನ್ಯಗಳನ್ನು ಭಟ್ಕಳ್ ಟಿ.ಎ.ಪಿ.ಸಿ.ಎಂ.ಎಸ್‌ಗೆ ಒಯ್ಯುವ ಬದಲಾಗಿ, ಮಂಗಳೂರು ಕಡೆ ಅಕ್ರಮವಾಗಿ ಸಾಗಿಸುತ್ತಿದ್ದುದ್ದರಿಂದ, ಕಾಪೂ ಪೋಲೀಸ್ ಠಾಣೆಯಲ್ಲಿ ಈ ಬಗ್ಗೆ ಕ್ರೈಂ.ನಂ.180/2010 ರಲ್ಲಿ

ಪ್ರಕರಣ ದಾಖಲಾಗಿತ್ತು ಹಾಗೂ ಲಾರಿ ಸಮೇತ ಅದರಲ್ಲಿದ್ದ ಆಹಾರ ಧಾನ್ಯಗಳನ್ನು ಸೀಜ್ ಮಾಡಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

25. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಪ್ರಕರಣ ದಾಖಲಾದ ಬಗ್ಗೆ ದಿನಪತ್ರಿಕೆಯಲ್ಲಿ " ಪಡಿತರ ಗೋಧಿ ಅಕ್ರಮ ಸಾಗಾಟ, ಮೂವರು ವಶಕ್ಕೆ " ಎಂಬ ಶಿರೋನಾಮೆಯಲ್ಲಿ ಪ್ರಕಟಗೊಂಡಿತ್ತು. ಸದರಿ ಪತ್ರಿಕಾ ವರದಿಯ ಜೆರಾಕ್ಸ್ ಪ್ರತಿಯನ್ನು ನಿಶಾನೆ ಪಿ.1 ಎಂದು ಗುರುತಿಸಿರುತ್ತಾರೆ. ಪತ್ರಿಕಾ ವರದಿಯಲ್ಲಿ ಆಹಾರ ನಿಗಮದಿಂದ ಈ ಮೇಲೆ ಹೇಳಲಾದ ಲಾರಿಯಲ್ಲಿ 268 ಚೀಲ ಗೋಧಿ ಅಕ್ರಮವಾಗಿ ಸಾಗಾಣಿಕೆಯಾಗುತ್ತಿತ್ತು ಎಂದು ಪ್ರಕಟಿಸಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

26. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಪತ್ರಿಕಾ ಪ್ರಕಟಣೆಯನ್ನು ನೋಡಿದ ನಂತರ ತಾನು ಕಾಪೂ ಪೋಲೀಸ್ ಠಾಣೆಯಲ್ಲಿ ಈ ಬಗ್ಗೆ ಮಾಹಿತಿಯನ್ನು ಕೋರಿ ಅರ್ಜಿ ಸಲ್ಲಿಸಿದಾಗ ಕಾಪೂ ಪೋಲೀಸ್ ಠಾಣೆಯ ಪೋಲೀಸರು ಲಾರಿಯನ್ನು ಹಾಗೂ ಅದರಲ್ಲಿದ್ದ ಆಹಾರ ಧಾನ್ಯವನ್ನು ಜಪ್ತಿ ಮಾಡಿ, ಪ್ರಕರಣ ದಾಖಲಿಸಿಕೊಂಡ ಬಗ್ಗೆ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ನೀಡಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

27. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತದನಂತರ ತಾನು ಆಹಾರ ನಿಗಮದ ಪೆರಂಪಳ್ಳಿ ಶಾಖೆಯ ಅಧಿಕಾರಿಗಳಿಗೆ ಈ ಮೇಲೆ ಹೇಳಲಾದ ಲಾರಿಯಲ್ಲಿ ಎಷ್ಟು ಆಹಾರ ಧಾನ್ಯಗಳನ್ನು ಎಲ್ಲಿಗೆ ಕಳುಹಿಸಲಾಗಿದೆ? ಯಾವ ಸಮಯಕ್ಕೆ ಕಳುಹಿಸಲಾಗಿದೆ? ಎನ್ನುವ ಮುಂತಾದ ಮಾಹಿತಿಯನ್ನು ಕೋರಿ, ದಾಖಲೆಗಳನ್ನು ಒದಗಿಸುವಂತೆ ಕೇಳಿದಾಗ, ಅವರು ಈ ಮೇಲೆ ಹೇಳಲಾದ ಲಾರಿಯಲ್ಲಿ ಲೋಡಾದ ಪಡಿತರದ ಬಗ್ಗೆ ದಾಖಲೆಗಳನ್ನು ನೀಡಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

28. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಆಹಾರ ನಿಗಮದವರು ತಾನು ಕೇಳಿದ ಮಾಹಿತಿಯ ಬಗ್ಗೆ ಮಾಹಿತಿಯನ್ನು ನೀಡಿ, ಸದರಿ ಲಾರಿಯಲ್ಲಿ ಏನು ಆಹಾರ ಧಾನ್ಯ ಲೋಡಾಗಿತ್ತು, ಎಲ್ಲಿಗೆ ತಲುಪಿಸಬೇಕಾಗಿತ್ತು, ಮುಂತಾದ ಮಾಹಿತಿಗಳನ್ನೊಳಗೊಂಡ ದಾಖಲೆಗಳನ್ನು ತನಗೆ ನೀಡಿದರು. ಈ ಮೇಲೆ ಹೇಳಲಾದ ಮಾಹಿತಿಯನ್ನು ಪಡೆದುಕೊಂಡ ನಂತರ, ತಾನು ಹೊನ್ನಾವರ ಕೃಷಿ ಹುಟ್ಟುವಳಿ ಸಹಕಾರಿ ಮಾರಾಟ ಸಂಘಕ್ಕೆ ಅರ್ಜಿ ಸಲ್ಲಿಸಿ, ಈ ಮೇಲೆ ಹೇಳಲಾದ ಲಾರಿಯಲ್ಲಿಯ ಆಹಾರ ಧಾನ್ಯಗಳು ಸ್ವೀಕೃತವಾದ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದಾಗ, ಅವರು ಮಾಹಿತಿ ನೀಡಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

29. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಈ ಮೇಲೆ ಹೇಳಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಒಂದೇ ಸಂಖ್ಯೆಯ ಲಾರಿಯು ಆಹಾರ ನಿಗಮದ ಪೆರಂಪಳ್ಳಿಯಿಂದ ಲೋಡಾಗಿ, ಗೇಟ್ ಪಾಸ್ ರಿಜಿಸ್ಟರ್ ಪ್ರಕಾರ ಸಂಜೆ 5.15ಕ್ಕೆ ದಿನಾಂಕ : 09/08/2010 ರಂದು ಬಿಟ್ಟಿದ್ದು, ಅದೇ ದಿನ ಸಂಜೆ 5.40ಕ್ಕೆ ಕಾಪೂ ಪೋಲೀಸ್ ಠಾಣೆಯಲ್ಲಿ ಜಫ್ತ್ ಆಗಿದ್ದು ಹಾಗೂ ಸದರಿ ಲಾರಿ ದಾಖಲೆಗಳ ಪ್ರಕಾರ ಭಟ್ಕಳ ಕಡೆಗೆ ಹೋಗಬೇಕಾಗಿದ್ದು, ಅದರ ಬದಲಾಗಿ ಮಂಗಳೂರು ಮಾರ್ಗವಾಗಿ ಕಾಪೂ ಪೋಲೀಸ್ ಠಾಣೆ ಮಾರ್ಗವಾಗಿ ಹೊರಟಾಗ, ಪೋಲೀಸರಿಂದ ಅಕ್ರಮ ಸಾಗಾಣಿಕೆ ಎಂದು ಜಪ್ತಿ ಮಾಡಿದ್ದು, ಇದರ ಮೇಲಿಂದ ಇದು ಅಕ್ರಮ ಸಾಗಾಣಿಕೆ ಆಗಿದೆ ಎಂದು ಮತ್ತು ಅದಕ್ಕೆ ಯಾರು ಯಾರು ಹೊಣೆಗಾರರು ಎನ್ನುವ ಬಗ್ಗೆ ತನಿಖೆಯಾಗಬೇಕೆಂದು ತಾನು ಮಾನ್ಯ ಲೋಕಾಯುಕ್ತರಲ್ಲಿ ದೂರನ್ನು ದಾಖಲೆಗಳ ಸಮೇತ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ತಾನು ಸಲ್ಲಿಸಿದ ದೂರನ್ನು ಗುರುತಿಸಿದ್ದು, ಅದನ್ನು ವಿಚಾರಣೆ ಸಂಖ್ಯೆ:160/2016 ರಲ್ಲಿ ನಿಶಾನೆ ಪಿ-1 ಎಂದು ಗುರುತಿಸಿರುತ್ತಾರೆ. ಈ ವಿಚಾರಣೆಯಲ್ಲಿ ನಿಶಾನೆ ಪಿ-2 ಎಂದು ಗುರುತಿಸಲಾಗಿದೆ. ಪ್ರಪತ್ರ-1 ಮತ್ತು 2 ನ್ನು ವಿಚಾರಣೆ ಸಂಖ್ಯೆ.160/2016 ರಲ್ಲಿ ನಿಶಾನೆ ಪಿ-2 ಮತ್ತು ನಿಶಾನೆ ಪಿ-3 ಎಂದು ಗುರುತಿಸಿರುತ್ತಾರೆ.

ಈ ವಿಚಾರಣೆಯಲ್ಲಿ ನಿಶಾನೆ.ಪಿ–3 ಮತ್ತು ನಿಶಾನೆ ಪಿ–4 ಎಂದು ಗುರುತಿಸಿರುತ್ತಾರೆ. ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ ದವರು ಒದಗಿಸಿದ ದಾಖಲೆಗಳನ್ನು ಒಟ್ಟಾಗಿ ನಿಶಾನೆ ಪಿ–5 (14 ಪುಟಗಳು) ಎಂದು ಗುರುತಿಸಿರುತ್ತಾರೆ.

30. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ತಾನು ದೂರು ಕೊಟ್ಟ ನಂತರ ದಿನಾಂಕ: 19/3/2011 ರಂದು ಆಗಿನ ಮಾನ್ಯ ಲೋಕಾಯುಕ್ತ ರವರಾದ ಶ್ರೀ. ಸಂತೋಷ್ ಹೆಗ್ಡೆ ರವರಿಗೆ ಮತ್ತೊಂದು ಮನವಿಯನ್ನು ಸಲ್ಲಿಸಿದ್ದು, ಅದನ್ನು ಈಗಾಗಲೇ ವಿಚಾರಣೆ ಸಂಖ್ಯೆ: 160/2016 ರಲ್ಲಿ ನಿಶಾನೆ ಪಿ–5 ಎಂದು ಗುರುತಿಸಿರುತ್ತಾರೆ. ಅದನ್ನು ಈ ವಿಚಾರಣೆಯನ್ನು ನಿಶಾನೆ ಪಿ–6 ಎಂದು ಗುರುತಿಸಲಾಯಿತು. ತಾನು ದೂರು ಕೊಟ್ಟ ನಂತರ ತನ್ನ ದೂರಿಗೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತ ಕಚೇರಿಗೆ ಹೊನ್ನಾವರ ಕೃಷಿ ಹುಟ್ಟುವಳಿ ಸಹಕಾರಿ ಮಾರಾಟ ಸಂಘದ ವ್ಯವಸ್ಥಾಪಕರು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ ಮತ್ತು ಕಾಪೂ ಪೋಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವರು ಉಡುಪಿ ಪೋಲೀಸ್ ಉಪಾಧೀಕ್ಷಕರಿಗೆ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

31. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಉಪ ನಿರ್ದೇಶಕರು, ಕಾರವಾರ ಇವರು ಆಯುಕ್ತರು, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರಿಗೆ ವರದಿಯನ್ನು ಸಲ್ಲಿಸಿದ್ದು, ಅವುಗಳನ್ನು ಒಟ್ಟಾಗಿ ಈಗಾಗಲೇ ವಿಚಾರಣೆ ಸಂಖ್ಯೆ : 160/2016 ರಲ್ಲಿ ನಿಶಾನೆ ಪಿ–6 ಎಂದು ಗುರುತಿಸಲಾಗಿದ್ದು, ಅವುಗಳನ್ನು ಈ ವಿಚಾರಣೆಯಲ್ಲಿ ಒಟ್ಟಾಗಿ ನಿಶಾನೆ ಪಿ–7 (8 ಪುಟಗಳು) ಎಂದು ಗುರುತಿಸಿರುತ್ತಾರೆ.

32. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ತಾನು ಲೋಕಾಯುಕ್ತ ಸಂಸ್ಥೆಗೆ ಪ್ರತ್ಯುತ್ತರವನ್ನು ಹಾಗೂ ಪ್ರತ್ಯುತ್ತರದ ಜೊತೆ ದಾಖಲೆಗಳ ಪ್ರತಿಗಳನ್ನು ಹಾಜರುಪಡಿಸಿದ್ದು,

ಅವುಗಳನ್ನು ಈಗಾಗಲೇ ವಿಚಾರಣೆ ಸಂಖ್ಯೆ : 160/2016 ರಲ್ಲಿ ನಿಶಾನೆ ಪಿ–7 ಮತ್ತು ನಿಶಾನೆ ಪಿ–8 ಎಂದು ಗುರುತಿಸಲಾಗಿದ್ದು, ಅವುಗಳನ್ನು ಈ ವಿಚಾರಣೆಯಲ್ಲಿ ಒಟ್ಟಾಗಿ ನಿಶಾನೆ ಪಿ–8 (21 ಹಾಳೆಗಳು) ಎಂದು ಗುರುತಿಸಿರುತ್ತಾರೆ. ಪೋಲೀಸರು ತನಿಖೆ ಮಾಡಿ, ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ. ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ವಿನಂತಿಸಿಕೊಳ್ಳುತ್ತೇನೆ ಎಂದು ನುಡಿದಿರುತ್ತಾರೆ.

33. ಆ.ಸ.ನೌ ರವರ ಪರ ವಕೀಲರು ನಡೆಸಿದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ–1 ರವರು ತನ್ನ ಎರಡೂ ದೂರುಗಳಲ್ಲಿ ಆ.ಸ.ನೌ ರವರ ಹೆಸರನ್ನು ನಮೂದಿಸಿಲ್ಲ ಅನ್ನೋದು ನಿಜ. ತನ್ನ ದೂರುಗಳಲ್ಲಿ ಆ.ಸ.ನೌ ರವರು ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು? ಹಾಗೂ ಅವರ ಕರ್ತವ್ಯಗಳೇನು? ಎಂಬುದು ತನಗೆ ಗೊತ್ತಿರಲಿಲ್ಲ ಅನ್ನೋದು ನಿಜ. ತಾನು ಟಿ.ಎ.ಪಿ.ಸಿ.ಎಂ.ಎಸ್., ಭಟ್ಕಳ ಹಾಗೂ ಎಫ್.ಸಿ.ಐ, ಪೆರಂಪಳ್ಳಿ ಕಚೇರಿಗಳಲ್ಲಿ ದೂರು ದಾಖಲಿಸುವ ಸಮಯದಲ್ಲಿ ಜಾಬ್ ಚಾರ್ಟ್‌ಗಳನ್ನು ಪರಿಶೀಲಿಸಿರುವುದಿಲ್ಲ ಅನ್ನೋದು ನಿಜ. ಆ.ಸ.ನೌ ರವರಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

34. ಪಿ.ಡಬ್ಲ್ಯೂ–2/ಶ್ರೀಮತಿ. ಉಮಾ ಪ್ರಶಾಂತ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಅಕ್ಟೋಬರ್ 2014 ರಿಂದ ಮೇ 2016 ರವರೆಗೆ ಕಾರವಾರ ಪೋಲೀಸ್ ಉಪಾಧೀಕ್ಷಕರಾಗಿ ಕಾರವಾರ ಲೋಕಾಯುಕ್ತ ಕಚೇರಿಯಲ್ಲಿ ಕೆಲಸ ಮಾಡಿದ್ದೇನೆ. ತನ್ನ ಮೇಲಾಧಿಕಾರಿಗಳಾದ ಪೋಲೀಸ್ ಅಧೀಕ್ಷಕರಿಂದ ಕಾಪೂ ಪೋಲೀಸ್ ಠಾಣಾ ಅಪರಾಧ ಸಂಖ್ಯೆ : 180/2010 ರ ಪ್ರಕರಣದಲ್ಲಿ ದಿನಾಂಕ : 09/08/2010 ರಂದು ಸಾಯಂಕಾಲ 5–15 ಗಂಟೆಗೆ ಪೆರಂಪಳ್ಳಿಯ ಎಫ್.ಸಿ.ಐ. ನಿಗಮದ ಗೋದಾಮಿನಿಂದ ಭಟ್ಕಳದ ಟಿ.ಎ.ಪಿ.ಸಿ.ಎಂ.ಎಸ್.ಗೆ ಸಾರ್ವಜನಿಕ ಪಡಿತರಕ್ಕೆ ವಿತರಿಸುವುದಕ್ಕಾಗಿ ಸಾಗಿಸಬೇಕಾದ 82

ಚೀಲ ಅಕ್ಕಿ, 186 ಚೀಲ ಗೋಧಿಯನ್ನು ಉಡುಪಿ ಎಫ್.ಸಿ.ಐ ನಿಂದ ಸ್ವೀಕರಿಸಿದ ಬಗ್ಗೆ ಸಹಿ ಮಾಡಿ, ಅವುಗಳ ಬದಲಾಗಿ ಕೇವಲ 266 ಚೀಲ ಗೋಧಿ ಚೀಲಗಳನ್ನು ಕೆಎ–19/1669 ಸಂಖ್ಯೆಯ ಲಾರಿಗೆ ಲೋಡ್ ಮಾಡಿಸಿಕೊಂಡು, ಭಟ್ಕಳದ ಟಿ.ಎ.ಪಿ.ಸಿ.ಎಂ.ಎಸ್ ಗೆ ಸಾಗಿಸುವ ಬದಲಾಗಿ, ಮಂಗಳೂರಿನ ರೋಲರ್ ಫ್ಲೋರ್ ಮಿಲ್ಸ್‌ಗೆ ಅಕ್ರಮವಾಗಿ ಮಾರಾಟಕ್ಕಾಗಿ ಸಾಗಾಟ ಮಾಡುತ್ತಿದ್ದಾಗ, ಕಾಪೂ ಪೋಲೀಸ್ ಠಾಣೆ ಪೋಲೀಸರು ಲಾರಿ ತಡೆದು, ತನಿಖೆ ಮಾಡಿದಾಗ ಸರ್ಕಾರಕ್ಕೆ ವಂಚಿಸುವ ಪ್ರಯತ್ನ ಮಾಡಿರುವುದು ಕಂಡು ಬಂದಿದ್ದರಿಂದ ಪ್ರಕರಣ ದಾಖಲಾಗಿದ್ದು, ಈ ಕುರಿತಂತೆ ಈ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾದ ವ್ಯಕ್ತಿಗಳ ತನಿಖೆ ಮಾಡಿ, ವರದಿ ಸಲ್ಲಿಸುವಂತೆ ತನಗೆ ಆದೇಶವಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

35. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಕಾಪೂ ಪೋಲೀಸ್ ಠಾಣೆ ಅಪರಾಧ ಸಂಖ್ಯೆ: 180/2010 ರ ಪ್ರಕರಣದಲ್ಲಿ ತನಿಖೆಯಾಗಿ ಸಂಬಂಧಪಟ್ಟ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿತ್ತು. ಆದರೆ, ಶಾಖಾ ವ್ಯವಸ್ಥಾಪಕರು ಕೃಷಿ ಹುಟ್ಟುವಳಿ ಸಹಕಾರಿ ಸಂಘ, ಭಟ್ಕಳ ಇವರು ದಿನಾಂಕ : 09/08/2010 ರಂದು ಲಾರಿ ಸಂಖ್ಯೆ : ಕೆಎ–19/1669 ರಿಂದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ತಮ್ಮ ಸ್ಟಾಕ್ ರಿಜಿಸ್ಟರ್‌ನಲ್ಲಿ ನಮೂದಿಸಿಕೊಂಡಿದ್ದು ಹಾಗೂ ಈ ಬಗ್ಗೆ ಸ್ಟಾಕ್ ರಿಜಿಸ್ಟರ್‌ನಲ್ಲಿ ಸದರಿ ಮೇಲ್ಕಾಣಿಸಿದ ಆಹಾರ ಧಾನ್ಯಗಳು ಸ್ವೀಕೃತಗೊಂಡಿರುವ ಬಗ್ಗೆ ಶಿರಸ್ತೇದಾರ್, ಭಟ್ಕಳ ಹಾಗೂ ಆಹಾರ ನಿರೀಕ್ಷಕರು, ಭಟ್ಕಳ ಇವರು ದೃಢೀಕರಿಸಿ ಈ ಬಗ್ಗೆ ಸರ್ಕಾರದಿಂದ ಬರತಕ್ಕ ಸಬ್ಸಿಡಿ ಹಣವನ್ನು ಪಡೆದುಕೊಂಡು ಅವ್ಯವಹಾರ ನಡೆಸಿರುವ ಬಗ್ಗೆ ಮತ್ತು ಸದರಿ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಬಗ್ಗೆ ತನಿಖೆ ನಡೆಸಿ, ವಿವರವಾದ ವರದಿ ಸಲ್ಲಿಸುವಂತೆ ಮಾನ್ಯ ಲೋಕಾಯುಕ್ತರ ಆದೇಶದ ಮೇರೆಗೆ ಕಾರವಾರ ಪೋಲೀಸ್ ಅಧೀಕ್ಷಕರು ತನಗೆ ಸೂಚಿಸಿದ ಮೇರೆಗೆ ತಾನು ತನಿಖೆ ಮಾಡಿ, ತನ್ನ ವರದಿ ಸಲ್ಲಿಸಿದ್ದು ಇರುತ್ತದೆ. ತಾನು ದಿನಾಂಕ :

31/03/2015 ರಂದು ಪೋಲೀಸ್ ಅಧೀಕ್ಷಕರು, ಕಾರವಾರ ಇವರಿಗೆ ಸಲ್ಲಿಸಿದ ವರದಿಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ.9 (ಮೂಲ ಕಡತಗಳು ಡಿ.ಇ.ಸಂಖ್ಯೆ: 160/2016 ರಲ್ಲಿ ಇರುತ್ತವೆ) ಎಂದು ಗುರುತಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

36. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತಾನು ವಿಚಾರಣೆ ಕುರಿತು ಹೊನ್ನಾವರ ಕೃಷಿ ಹುಟ್ಟುವಳಿ ಸಹಕಾರಿ ಮಾರಾಟ ಸಂಘ, ಹೊನ್ನಾವರಕ್ಕೆ ದಿನಾಂಕ : 23/02/2015 ರಂದು ಭೇಟಿ ಕೊಟ್ಟು, ಮಾಹಿತಿ ಸಂಗ್ರಹಿಸಲಾಗಿ ದಿನಾಂಕ : 09/08/2010 ರಂದು ಪೆರಂಪಳ್ಳಿ ಎಫ್.ಸಿ.ಐ. ಗೋಡೌನಿಂದ ಕೃಷಿ ಹುಟ್ಟುವಳಿ ಸಹಕಾರಿ ಮಾರಾಟ ಸಂಘ, ನಿ, ಶಾಖೆ ಭಟ್ಕಳಕ್ಕೆ ಹೋಗಬೇಕಾಗಿದ್ದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯ ಬದಲಾಗಿ 266 ಚೀಲ ಗೋಧಿಯನ್ನು ಲಾರಿ ಸಂಖ್ಯೆ: ಕೆಎ-19/1669ರಲ್ಲಿ ಅಕ್ರಮವಾಗಿ ತುಂಬಿ ಸಾಗಾಟ ಮಾಡುತ್ತಿದ್ದಾಗ, ಅದೇ ದಿನ ಸದರಿ ಲಾರಿಯನ್ನು ಕಾಪೂ ಪೋಲೀಸ್ ಠಾಣೆಯ ಪೋಲೀಸರು ತಪಾಸಿಸಿ, ಅಪರಾಧ ಸಂಖ್ಯೆ : 180/2010 ರಲ್ಲಿ ದಾಖಲಿಸಿಕೊಂಡಿರುವ ಮಾಹಿತಿಯನ್ನು ಕಾಪೂ ಠಾಣೆ ಪೋಲೀಸರು ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಕಚೇರಿಗೆ ಮಾಹಿತಿಯನ್ನು ನೀಡಿದ್ದರೂ ಸಹ ಸದರಿ ಸಂಸ್ಥೆಯವರು ಯಾವುದೇ ಕ್ರಮವನ್ನು ಕೈಗೊಂಡಿದ್ದು ಕಂಡುಬರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

37. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ನಂತರದಲ್ಲಿ ಸದರಿ ಅವ್ಯವಹಾರದ ಬಗ್ಗೆ ಬೆಂಗಳೂರು ಲೋಕಾಯುಕ್ತ ಕಚೇರಿಯಲ್ಲಿ ದೂರು ದಾಖಲಾದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆದೇಶವಾಗಿದ್ದು, ಅದರಂತೆ ಸದರಿ ಸಂಸ್ಥೆಯವರು ದಿನಾಂಕ: 03/06/2014 ರಂದು ಶ್ರೀ. ಹೆಚ್.ವಿ. ನಾಯಕ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿವೃತ್ತ), ಹೊನ್ನಾವರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ, ಅವರ ವಿಚಾರಣಾ ವರದಿಯ ಆಧಾರದ ಮೇಲೆ ಶ್ರೀ. ಎಂ.ಹೆಚ್. ಗೌಡ, ಶಾಖಾ ವ್ಯವಸ್ಥಾಪಕರು,

ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಶಾಖೆ, ಭಟ್ಕಳ್ ಇವರನ್ನು ಕಡ್ಡಾಯ ನಿವೃತ್ತಿಗೆ ಕಳುಹಿಸಿರುವ ಬಗ್ಗೆ ತಿಳಿದುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

38. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತನ್ನ ವಿಚಾರಣೆಯ ಕಾಲಕ್ಕೆ ಶ್ರೀ ಹೆಚ್.ವಿ. ನಾಯಕ್ ಇವರ ವಿಚಾರಣಾ ವರದಿಯನ್ನು ಸಂಗ್ರಹಿಸಿ, ತನ್ನ ವರದಿಯೊಂದಿಗೆ ಸಲ್ಲಿಸಿದ್ದು, ಸದರಿ ವಿಚಾರಣಾ ವರದಿಯ ಪ್ರತಿಯನ್ನು ನಿಶಾನೆ ಪಿ.10 (ಒಟ್ಟು 27 ಹಾಳೆಗಳು) (ಮೂಲ ಕಡತಗಳು ಡಿ.ಇ.ಸಂಖ್ಯೆ: 160/2016 ರಲ್ಲಿ ಇರುತ್ತವೆ) ಎಂದು ಗುರುತಿಸಿರುತ್ತಾರೆ.

39. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತಾನು ಅದೇ ದಿನ ಹೊನ್ನಾವರ ಕೃಷಿ ಹುಟ್ಟುವಳಿ ಮಾರಾಟ ಸಂಘ ನಿಯಮಿತ, ಹೊನ್ನಾವರ ಶಾಖೆ, ಭಟ್ಕಳ ಕಚೇರಿಗೆ ಭೇಟಿ ನೀಡಿ, ಅಲ್ಲಿನ ಗೋಡೌನಿನ ರಿಜಿಸ್ಟರ್ ಅನ್ನು ಪರಿಶೀಲಿಸಿದಾಗ, ಆಗಿನ ಗೋಡೌನಿನ ಕೀಪರ್ ಆದ ನಾಗಪ್ಪ ವೆಂಕಟಪ್ಪ ನಾಯಕ್ ಇವರು ದಿನಾಂಕ : 09/08/2010 ರಂದು ಲಾರಿ ಸಂಖ್ಯೆ: ಕೆಎ-19/1669 ನೇದ್ದರಿಂದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ನಮೂದಿಸಿರುವುದು ಕಂಡು ಬಂದಿರುತ್ತದೆ ಹಾಗೂ ರಿಜಿಸ್ಟರ್‌ನಲ್ಲಿ ತಿದ್ದುಪಡಿ ಸಹ ಮಾಡಿರುವುದು ಕಂಡುಬಂದಿರುತ್ತದೆ. ನಂತರ ಸದರಿ ಸಂಸ್ಥೆಯ ಸ್ಟಾಕ್ ರಿಜಿಸ್ಟರ್ ಅನ್ನು ಪರಿಶೀಲಿಸಿದಾಗ, ಅಂದಿನ ಶಾಖಾ ವ್ಯವಸ್ಥಾಪಕರಾದ ಎಂ.ಹೆಚ್. ಗೌಡ ಇವರು ಈ ಮೇಲೆ ಹೇಳಿದ ಲಾರಿಯಿಂದ ಮೇಲೆ ಹೇಳಿದ ಆಹಾರ ಧಾನ್ಯಗಳನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ತಮ್ಮ ಸ್ಟಾಕ್ ರಿಜಿಸ್ಟರ್‌ನಲ್ಲಿ ನಮೂದಿಸಿರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

40. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಮೇಲೆ ಹೇಳಿದ ಗೋಡೌನ ಕೀಪರ್ ನಾಗಪ್ಪ ನಾಯಕ ಇವರು ಹಾಲಿ ಭಟ್ಕಳ ರೀಟೇಲ್ ಸೆಕ್ಷನ್ ಅಂಗಡಿ ಸಂಖ್ಯೆ : 28, 29 ಮತ್ತು 31 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಕಂಡು ಬಂದಿರುತ್ತದೆ. ಸದರಿ ಅವ್ಯವಹಾರಕ್ಕೆ

ಸಂಬಂಧಪಟ್ಟಂತೆ ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಸಂಸ್ಥೆ ಇವರು ಭಟ್ಕಳ ಶಾಖಾ ವ್ಯವಸ್ಥಾಪಕರಾದ ಶ್ರೀ. ಎಂ.ಹೆಚ್. ಗೌಡ ಇವರ ಮೇಲೆ ಮಾತ್ರ ಸೂಕ್ತ ಕ್ರಮ ಕೈಗೊಂಡಿದ್ದು, ಗೋಡೌನಿನ ಕೀಪರ್ ಆದ ಶ್ರೀ. ನಾಗಪ್ಪ ನಾಯಕ ಇವರ ಮೇಲೆ ಯಾವುದೇ ಕ್ರಮ ಕೈಗೊಂಡಿದ್ದು ಕಂಡು ಬಂದಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

41. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಈ ಮೇಲೆ ಹೇಳಲಾದ ಆಹಾರ ಧಾನ್ಯಗಳು ಭಟ್ಕಳ ಶಾಖೆಯಲ್ಲಿ ಸ್ವೀಕೃತಗೊಂಡಿರುವ ಬಗ್ಗೆ ಆಗಿನ ಭಟ್ಕಳ ತಾಲ್ಲೂಕು ಆಹಾರ ನಿರೀಕ್ಷಕರಾದ ಶ್ರೀ. ಕೆ.ಬಿ. ಶಂಕರಪ್ಪ ಹಾಗೂ ಶಿರಸ್ತೇದಾರ ಶ್ರೀ. ಎಂ.ಎಲ್.ನಾಯಕ್ ಇವರು ದಿನಾಂಕ : 09/08/2010 ರಂದು ಸ್ಟಾಕ್ ರಿಜಿಸ್ಟರ್‌ದಲ್ಲಿ ದೃಢೀಕರಿಸಿದ್ದು ಕಂಡುಬರುತ್ತದೆ. ಆಹಾರ ನಿರೀಕ್ಷಕರಾದ ಕೆ.ಬಿ. ಶಂಕರಪ್ಪ ಇವರು ದಿನಾಂಕ : 31/08/2014 ರಂದು ತಹಶೀಲ್ದಾರ್ ಕಚೇರಿ, ಜೊಯಿಡಾದಲ್ಲಿ ನಿವೃತ್ತಿ ಹೊಂದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

42. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಆಹಾರ ಶಿರಸ್ತೇದಾರ್ ಎಂ.ಎಲ್. ನಾಯಕ್ ಇವರು 31/05/2014 ರಂದು ತಹಶೀಲ್ದಾರ್ ಕಚೇರಿ, ಹೊನ್ನಾವರದಲ್ಲಿ ನಿವೃತ್ತಿ ಹೊಂದಿರುತ್ತಾರೆ. ದಿನಾಂಕ : 09/08/2010 ರಂದು ಲಾರಿ ಸಂಖ್ಯೆ: ಕೆಎ-19/1669 ನೇದ್ದು ಉಡುಪಿ ಜಿಲ್ಲೆಯ ಪೆರಂಪಳ್ಳಿಯ ಎಫ್‌ಸಿಐ ಗೋಡೌನಿಂದ ಸಾಯಂಕಾಲ 5.15 ಗಂಟೆಗೆ ನಿರ್ಗಮಿಸಿದ್ದು, ಅದೇ ದಿನ ಸಂಜೆ 5.40 ಗಂಟೆಗೆ ಸದರಿ ವಾಹನವನ್ನು ಆಹಾರ ಧಾನ್ಯಗಳ ಸಮೇತ ಕಾಪೂ ಪೋಲೀಸರು ಹಾಗೂ ಉಡುಪಿ ಕಂದಾಯ ಇಲಾಖೆಯ ಅಧಿಕಾರಿಗಳು ಜಫ್ತ್ ಮಾಡಿ, ಕಾಪೂ ಪೋಲೀಸ್ ಠಾಣೆ ಅಪರಾಧ ಸಂಖ್ಯೆ: 180/2010 ನೇದ್ದರಂತೆ ಪ್ರಕರಣ ದಾಖಲಿಸಿ, ಜಫ್ತು ಪಡಿಸಿಕೊಂಡು ಲಾರಿ ಹಾಗೂ ಅದರಲ್ಲಿರುವ ಆಹಾರ

ಧಾನ್ಯಗಳನ್ನು ಜಿಲ್ಲಾಧಿಕಾರಿ, ಉಡುಪಿ ರವರಿಗೆ ಹಸ್ತಾಂತರಿಸಿದ್ದು ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

43. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಆ ಕಾರಣದಿಂದ ಸದರಿ ವಾಹನವು ದಿನಾಂಕ : 09/08/2010 ರಂದು ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಶಾಖೆ ಭಟ್ಕಳಕ್ಕೆ ಬರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದ್ದರಿಂದ, ಸದರಿ ಅವ್ಯವಹಾರದಲ್ಲಿ ಭಟ್ಕಳ ತಾಲ್ಲೂಕು ಆಹಾರ ನಿರೀಕ್ಷಕರಾದ ಕೆ.ಬಿ. ಶಂಕರಪ್ಪ ಹಾಗೂ ಶಿರಸ್ತೇದಾರ್ ಎಂ.ಎಲ್.ನಾಯಕ್ ಇವರು ಭಾಗಿಯಾಗಿರುವ ಬಗ್ಗೆ ಹಾಗೂ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿರುವುದು ಕಂಡುಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

44. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತಾನು ವಿಚಾರಣೆಯ ಕಾಲಕ್ಕೆ ಸಂಗ್ರಹಿಸಿದ ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಶಾಖೆ ಭಟ್ಕಳದಲ್ಲಿನ ಸ್ಟಾಕ್ ಬುಕ್ ಹಾಗೂ ಗೋಡೌನ್ ರಿಜಿಸ್ಟರ್ ದ ಪ್ರತಿಗಳನ್ನು ನೋಡುತ್ತಿದ್ದು, ಅವುಗಳನ್ನು ಒಟ್ಟಾಗಿ ಈ ಪ್ರಕರಣದಲ್ಲಿ ನಿಶಾನೆ ಪಿ.11 (ಒಟ್ಟು 9 ಹಾಳೆಗಳು) (ಮೂಲ ಕಡತಗಳು ಡಿ.ಇ.ಸಂಖ್ಯೆ: 160/2016 ರಲ್ಲಿ ಇರುತ್ತವೆ) ಎಂದು ಗುರುತಿಸಿರುತ್ತಾರೆ. ನಿಶಾನೆ ಪಿ.11 ರಲ್ಲಿ ಸಂಬಂಧಪಟ್ಟ ಭಾಗವನ್ನು ಹಳದಿ ಮಾರ್ಕರ್ ಪೆನ್ನಿನಿಂದ ಗುರುತಿಸಿರುತ್ತಾರೆ.

45. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಸದರಿ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ತಾನು ಉಪ ನಿರ್ದೇಶಕರ ಕಚೇರಿ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕಾರವಾರ ಕಚೇರಿಗೆ ಭೇಟಿ ನೀಡಿ, ದಾಖಲೆಗಳನ್ನು ಪರಿಶೀಲಿಸಿದ್ದು, ದಿನಾಂಕ : 09/08/2010 ರಂದು ಲಾರಿ ಸಂಖ್ಯೆ : ಕೆಎ-19-1669 ನೇದ್ದರಿಂದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಶಾಖೆ ಭಟ್ಕಳದಲ್ಲಿ ಸ್ವೀಕರಿಸಿ, ಆ ಬಗ್ಗೆ ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಶಾಖೆ, ಭಟ್ಕಳ

ರವರಿಗೆ ಸರ್ಕಾರದಿಂದ ಸಬ್ಸಿಡಿ ಬಿಲ್ಲುಗಳನ್ನು ಮಂಜೂರಿ ಮಾಡಿರುವುದು ಕಂಡು ಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

46. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಸದರಿ ಬಿಲ್ಲುಗಳ ಮಂಜೂರಿಗಾಗಿ, ಆಗಿನ ಭಟ್ಕಳ ತಾಲ್ಲೂಕು ತಹಶೀಲ್ದಾರ್ ರಾದ ಆ.ಸ.ನೌ ಜಿ.ಎಂ.ಬೋರ್ಕರ್ ಹಾಗೂ ಇ.ಒ.,ತಾಲ್ಲೂಕು ಪಂಚಾಯಿತಿ, ಭಟ್ಕಳ ಉದಯ್ ಎಂ ನಾಯಕ್ ಇವರು ಅನುಮೋದಿಸಿರುವುದು ಕಂಡು ಬಂದಿರುತ್ತದೆ. ಬೋರ್ಕರ್ ಇವರು ಪ್ರಸ್ತುತ ಹೊನ್ನಾವರ ತಾಲ್ಲೂಕು ತಹಶೀಲ್ದಾರ್‌ರಾಗಿ ಹಾಗೂ ಉದಯ್ ಎಂ ನಾಯಕ್ ಇವರು ತಾಲ್ಲೂಕಾ ಪಂಚಾಯತ್, ಕುಮಟಾ ಕಾರ್ಯನಿರ್ವಾಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

47. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಸದರಿ ಪ್ರಕರಣದಲ್ಲಿ ಮೇಲೆ ಹೇಳಿದ ಆಹಾರ ಧಾನ್ಯಗಳು ದಿನಾಂಕ : 09/08/2010 ರಂದು ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಶಾಖೆ, ಭಟ್ಕಳಕ್ಕೆ ಸ್ವೀಕೃತಗೊಳ್ಳದೇ ಇದ್ದರೂ ಹಾಗೂ ಈ ವಿಷಯ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದರೂ ಸಹ ಜವಾಬ್ದಾರಿಯುತ ಅಧಿಕಾರಿಯಾದ ಆ.ಸ.ನೌ ರವರು ಮತ್ತು ಉದಯ್ ಎಂ ನಾಯಕ್ ಇವರು ಸಬ್ಸಿಡಿ ಬಿಲ್ಲುಗಳ ಪಾವತಿಗಾಗಿ ತಮ್ಮ ಮೇಲಾಧಿಕಾರಿಗಳಿಗೆ ಅನುಮೋದನೆ ಮಾಡಿರುವುದು ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಬಗ್ಗೆ ಹಾಗೂ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿಸಿರುವ ಬಗ್ಗೆ ಕಂಡು ಬಂದಿರುತ್ತದೆ. ಸದರಿ ಆಹಾರ ಧಾನ್ಯಗಳ ಸಬ್ಸಿಡಿ ಬಿಲ್ಲುಗಳ ಪಾವತಿಸಿರುವ ಬಗ್ಗೆ ಇರುವ ದಾಖಲೆಗಳನ್ನು ತಾನು ಸಂಗ್ರಹಿಸಿದ್ದು, ಅವುಗಳನ್ನು ಒಟ್ಟಾಗಿ ಈ ಪ್ರಕರಣದಲ್ಲಿ ನಿಶಾನೆ ಪಿ.12 (ಒಟ್ಟು 23 ಹಾಳೆಗಳು) (ಮೂಲ ಕಡತಗಳು ಡಿ.ಇ.ಸಂಖ್ಯೆ: 160/2016 ರಲ್ಲಿ ಇರುತ್ತವೆ) ಎಂದು ಗುರುತಿಸಿರುತ್ತಾರೆ.

48. ಆ.ಸ.ನೌ ರವರ ಪರ ವಕೀಲರು ನಡೆಸಿದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ತನ್ನ ತನಿಖೆಗೆ ಅಥವಾ ವಿಚಾರಣೆಗೆ ಅವಶ್ಯಕತೆ ಇಲ್ಲದೇ ಇರುವ ಕಾರಣ ಆ.ಸ.ನೌ ರವರ ದೈನಂದಿನ ಕಾರ್ಯವೈಖರಿ ಬಗ್ಗೆ ತನಿಖೆ ಮಾಡಿರಲಿಲ್ಲ. ದೋಷಾರೋಪಣೆಯಲ್ಲಿ ತಿಳಿಸಿದಂತೆ ಸಬ್ಸಿಡಿ ಹಣ ತಡೆ ಹಿಡಿಯುವ ಬಗ್ಗೆ ಯಾವುದೇ ಸರ್ಕಾರಿ ಆದೇಶ ಇರಲಿಲ್ಲ, ನಿಶಾನೆ ಪಿ.9 ರ ವರದಿ ಸಲ್ಲಿಸುವ ಹಿಂದೆ ವಿಚಾರಣೆ ಸಮಯ ಪಿ.ಎ.ಪಿ.ಸಿ.ಎಂ.ಎಸ್.ಲಿ., ಹೊನ್ನಾವರ ಇಲ್ಲಿಗೆ ಒಮ್ಮೆ ಮಾತ್ರ ಭೇಟಿ ಕೊಟ್ಟಿದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

49. ಮುಂದುವರೆದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ಯಾವ ದಿನಾಂಕದಂದು ತಾನು ಆವರಣಕ್ಕೆ ಭೇಟಿ ಕೊಟ್ಟಿದ್ದೆ, ಯಾವ ಅಧಿಕಾರಿಗಳನ್ನು ವಿಚಾರಣೆ ಮಾಡಿದ್ದೆ ಎಂಬ ವಿವರಗಳು ನಿಶಾನೆ ಪಿ.9 ರಲ್ಲಿ ಇರುವುದಿಲ್ಲ ಎಂದರೆ ಸರಿ, ತನಗೆ ದಾಖಲೆಗಳು ಮಾತ್ರ ಅವಶ್ಯಕತೆ ಇದ್ದ ಕಾರಣ ಅವುಗಳನ್ನು ತಾನು ಭೇಟಿ ನೀಡಿದ ಸಮಯ ಪಡೆದುಕೊಂಡಿದ್ದೆ ಹಾಗೂ ಯಾರನ್ನು ವಿಚಾರಿಸಿ, ಹೇಳಿಕೆ ಪಡೆದುಕೊಂಡಿರಲಿಲ್ಲ ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ಲಿಖಿತವಾಗಿ ತನ್ನ ಬರುವಿಕೆ ಬಗ್ಗೆ ನೋಟೀಸ್ ಕೊಟ್ಟಿರಲಿಲ್ಲ ಆದರೆ ಮೌಖಿಕವಾಗಿ ತನಿಖೆಗಾಗಿ ಬರುವುದಾಗಿ ತಾನು ಫೋನಿನಲ್ಲಿ ತಿಳಿಸಿ ಆ ಕಚೇರಿಗೆ ಭೇಟಿ ಕೊಟ್ಟಿದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

50. ಮುಂದುವರೆದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ಸಬ್ಸಿಡಿ ಹಣ ಬಿಡುಗಡೆ ವಿಚಾರಣೆ ಮಾಡುವಾಗ ಆ.ಸ.ನೌ ರವರು ಸಹಿ ಮಾಡುವ ಮುನ್ನ ಎಲ್ಲಾ ನಿಯಮಗಳನ್ನು ಪಾಲಿಸಿರುತ್ತಾರೋ ಇಲ್ಲವೋ ಎಂಬುದನ್ನು ತಾನು ಸರಿಯಾಗಿ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ, ತನ್ನ ತನಿಖೆ ಸಮಯ ಆ.ಸ.ನೌ ರವರನ್ನು ಖುದ್ದಾಗಿ ವಿಚಾರಣೆ ಮಾಡಿಲ್ಲ, ಪೆರಂಪಳ್ಳಿ ಪೋಲೀಸ್ ಠಾಣೆ ಅಪರಾಧ ಕ್ರಮ ಸಂಖ್ಯೆ.180/2010 ಪ್ರಕರಣದಲ್ಲಿ ಆ.ಸ.ನೌ ರವರು ಆರೋಪಿಯಾಗಿರುವುದಿಲ್ಲ ಎಂದರೆ ತನಗೆ ಅದು ಗೊತ್ತಿಲ್ಲ, ಅವರ ವಿರುದ್ಧ ಈ ಘಟನೆಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ಕ್ರಿಮಿನಲ್ ಕೇಸ್ ದಾಖಲಾಗಿರುವುದಿಲ್ಲ

ಎಂದರೆ ಅದೂ ಸಹ ಗೊತ್ತಿಲ್ಲ ಹಾಗೂ ತಿಳಿದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

51. ಮುಂದುವರೆದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ಟಿ.ಎ.ಪಿ.ಸಿ.ಎಂ.ಎಸ್. ಗೋದಾಮುಗಳಿಗೆ ಯಾವುದೇ ಲೋಡ್ ಬಂದಲ್ಲಿ ಅವುಗಳನ್ನು ಗೋದಾಮಿಗೆ ಇಳಿಸಿ ಸಂಬಂಧಪಟ್ಟ ರಿಜಿಸ್ಟರ್‌ಗಳಲ್ಲಿ ವಿವರಗಳನ್ನು ಗೋಡೌನ್ ಕೀಪರ್ ಹಾಗೂ ಶಾಖಾ ವ್ಯವಸ್ಥಾಪಕರು ನಮೂದಿಸುತ್ತಾರೆ ಹಾಗೂ ಅವುಗಳನ್ನು ಪರಿಶೀಲಿಸಿದ ನಂತರ ತಹಶೀಲ್ದಾರ್ ರವರು ಹಣ ಬಿಡುಗಡೆಗೆ ಸಹಿ ಮಾಡುವ ಕ್ರಮ ಇರುತ್ತದೆ ಎಂದರೆ ಸರಿ, ಈ ಪ್ರಕರಣದಲ್ಲಿ ಮೇಲೆ ಹೇಳಿದ ರೀತಿ ಕ್ರಮ ಜರುಗಿಸಲಾಗಿದೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

52. ಮುಂದುವರೆದ ಪಾಟೀ ಸವಾಲಿನಲ್ಲಿ ಆ.ಸ.ನೌ ರವರು ಯಾವುದೇ ತಪ್ಪು ಮಾಡಿರುವುದಿಲ್ಲ, ಮಾಡದೇ ಇದ್ದರೂ ಅವರ ವಿರುದ್ಧ ತಾನು ಸುಳ್ಳು ವರದಿ ಕೊಟ್ಟಿರುತ್ತೇನೆ, ತಾನು ಸರಿಯಾದ ತನಿಖೆ ಮಾಡದೆ ಕೇವಲ ದಿನಪತ್ರಿಕೆಗಳ ವರದಿಗಳನ್ನು ಆಧರಿಸಿ ಆ.ಸ.ನೌ ರವರು ತಪ್ಪಿತಸ್ಥರಾಗಿರುತ್ತಾರೆ ಎಂದು ನಿಶಾನೆ ಪಿ.9 ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

53. ಆ.ಸ.ನೌ ರವರು ತಮ್ಮ ಪರವಾಗಿ ಯಾವುದೇ ಸಾಕ್ಷಿದಾರರು ಹಾಗೂ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

54. ಈ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಲಾದ ದೂರುದಾರ ಸಾಕ್ಷಿ-1 ಗೋಪಾಲ ಶಾಸ್ತ್ರಿ ಮತ್ತು ಪ್ರಕರಣದ ತನಿಖೆ ಮಾಡಿದ ತನಿಖಾಧಿಕಾರಿ ಸಾಕ್ಷಿ-2 ಉಮಾ ಪ್ರಶಾಂತ್ ಇವರ ಹೇಳಿಕೆಗಳನ್ನು ಹಾಗೂ ಶಿಸ್ತು ಪ್ರಾಧಿಕಾರದ ಪರವಾಗಿ

ಗುರುತಿಸಿಕೊಂಡಿರುವ ನಿಶಾನೆ.ಪಿ-1 ರಿಂದ 12 ರ ವರೆಗಿನ ದಾಖಲೆಗಳನ್ನು ಪರಿಶೀಲಿಸಲಾಯಿತು.

55. ದೂರುದಾರ ಸಾಕ್ಷಿ-1 ರವರಿಂದ ಗುರುತಿಸಿಕೊಂಡಿರುವ ನಿಶಾನೆ ಪಿ-1 ದಾಖಲೆಯು ದಿನಪತ್ರಿಕೆಯಲ್ಲಿ " ಪಡಿತರ ಗೋಧಿ ಅಕ್ರಮ ಸಾಗಾಟ, ಮೂವರು ವಶಕ್ಕೆ " ಎಂಬ ಶಿರೋನಾಮೆಯಲ್ಲಿ ಪ್ರಕಟಗೊಂಡ ಸುದ್ದಿಯಾಗಿರುತ್ತದೆ. ನಿಶಾನೆ ಪಿ-2 ದೂರು, ನಿಶಾನೆ ಪಿ-3 ಮತ್ತು 4 ಪ್ರಪತ್ರ-1 ಮತ್ತು 2 ಆಗಿವೆ. ನಿಶಾನೆ ಪಿ-5 ಆಹಾರ ನಿಗಮದವರು ದೂರುದಾರರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ನೀಡಿದ ದಾಖಲೆಗಳಾಗಿವೆ. ನಿಶಾನೆ ಪಿ-6 ದೂರುದಾರರು ಗೌರವಾನ್ವಿತ ಲೋಕಾಯುಕ್ತ ಸಂತೋಷ್ ಹೆಗ್ಡೆ ಇವರಿಗೆ ಸಲ್ಲಿಸಿದ ಮತ್ತೊಂದು ಮನವಿಯಾಗಿದೆ. ನಿಶಾನೆ ಪಿ-7 ರ ದಾಖಲೆ ಹೊನ್ನಾವರ ಕೃಷಿ ಹುಟ್ಟುವಳಿ ಮಾರಾಟ ಸಹಕಾರಿ ಸಂಘದ ವ್ಯವಸ್ಥಾಪಕರು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಆಕ್ಷೇಪಣೆ, ಕಾಪೂ ಪೋಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವರು ಉಡುಪಿ ಪೋಲೀಸ್ ಉಪಾಧೀಕ್ಷಕರಿಗೆ ಸಲ್ಲಿಸಿದ ವರದಿ ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಉಪ ನಿರ್ದೇಶಕರು, ಕಾರವಾರ ಇವರು ಆಯುಕ್ತರು, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಸಲ್ಲಿಸಿದ ವರದಿ ದಾಖಲೆಗಳಾಗಿರುತ್ತವೆ. ನಿಶಾನೆ ಪಿ-8 ದಾಖಲೆಯು ದೂರುದಾರರು ಸಲ್ಲಿಸಿದ ಪ್ರತ್ಯುತ್ತರ ಹಾಗೂ ಪ್ರತ್ಯುತ್ತರದ ಜೊತೆ ಸಲ್ಲಿಸಿದ ದಾಖಲೆಗಳ ಪ್ರತಿಗಳು. ತನಿಖಾಧಿಕಾರಿ ಸಾಕ್ಷಿ-2 ರವರ ಹೇಳಿಕೆಯಲ್ಲಿ ಗುರುತಿಸಿಕೊಂಡಿರುವ ದಾಖಲೆಗಳಲ್ಲಿ ನಿಶಾನೆ ಪಿ-9 ತನಿಖಾಧಿಕಾರಿಗಳು ಪೋಲೀಸ್ ಅಧೀಕ್ಷಕರು, ಕಾರವಾರ ಇವರಿಗೆ ಸಲ್ಲಿಸಿದ ವರದಿ. ನಿಶಾನೆ ಪಿ-10 ತನಿಖಾಧಿಕಾರಿಗಳು ತನಿಖೆ ಕಾಲಕ್ಕೆ ಶ್ರೀ. ಎಂ.ಹೆಚ್. ಗೌಡ, ಶಾಖಾ ವ್ಯವಸ್ಥಾಪಕರು, ಟಿ.ಎ.ಪಿ.ಸಿ.ಎಂ.ಎಸ್(ಅ), ಹೊನ್ನಾವರ ಶಾಖೆ, ಭಟ್ಕಳ್ ಇವರ ವಿರುದ್ಧ ವಿಚಾರಣಾಧಿಕಾರಿ ಶ್ರೀ. ಹೆಚ್.ವಿ. ನಾಯಕ್ ಇವರು ಸಲ್ಲಿಸಿದ ವಿಚಾರಣಾ ವರದಿ. ನಿಶಾನೆ ಪಿ-11 ಟಿ.ಎ.ಪಿ.ಸಿ.ಎಂ.ಎಸ್ (ಅ), ಹೊನ್ನಾವರ ಶಾಖೆ, ಭಟ್ಕಳ್‌ದಲ್ಲಿನ ಸ್ಟಾಕ್ ಬುಕ್ ಹಾಗೂ

ಗೋಡೋನ್ ರಿಜಿಸ್ಟರ್ ಪ್ರತಿಗಳು. ನಿಶಾನೆ ಪಿ-12 ಆಹಾರ ಧಾನ್ಯಗಳ ಸಬ್ಸಿಡಿ ಬಿಲ್ಲುಗಳ ಪಾವತಿಸಿರುವ ಬಗ್ಗೆ ಇರುವ ದಾಖಲೆಗಳಾಗಿರುತ್ತವೆ.

56. ಸಾಕ್ಷಿ-1 ದೂರುದಾರರು ನಿಶಾನೆ ಪಿ-1 ಸುದ್ದಿ ಪ್ರಕಟವಾಗಿರುವುದನ್ನು ತಿಳಿದು ಹಾಗೂ ಅದರಲ್ಲಿ ದಿನಾಂಕ : 9/8/2010 ರಂದು ಲಾರಿ ಸಂಖ್ಯೆ. ಕೆಎ-19/1669 ರಲ್ಲಿ ಸಂಜೆ ಸುಮಾರು 5-15 ಕ್ಕೆ ಫುಡ್ ಕಾರ್ಪೂರೇಷನ್ ಆಫ್ ಇಂಡಿಯಾ, ಪೆರಂಪಳ್ಳಿ ಶಾಖೆಯಿಂದ ಆಹಾರ ಧಾನ್ಯಗಳನ್ನು ಪಡಿತರ ವ್ಯವಸ್ಥೆಯಲ್ಲಿ ವಿತರಣೆ ಮಾಡುವುದಕ್ಕೋಸ್ಕರ ಹೊರಟಿದ್ದು, ಅದರಲ್ಲಿದ್ದ ಆಹಾರ ಧಾನ್ಯದ ಚೀಲಗಳು ಟಿ.ಎ.ಪಿ.ಸಿ.ಎಂ.ಎಸ್ ಭಟ್ಕಳ್ ಶಾಖೆಗೆ ಹೋಗಬೇಕಾಗಿದ್ದು, ಆದರೆ ಲಾರಿಯು ನೇರವಾಗಿ ಭಟ್ಕಳಕ್ಕೆ ಹೋಗುವ ಬದಲಾಗಿ ಮಂಗಳೂರು ಮಾರ್ಗದಲ್ಲಿ ಹೊರಟಾಗ ಕಾಪೂ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಅದೇ ಲಾರಿಯನ್ನು ಸಂಜೆ 5-40 ಕ್ಕೆ ತಡೆದು ಉಡುಪಿ ಆಹಾರ ನಿರೀಕ್ಷಕರು ಹಾಗೂ ಉಡುಪಿ ತಹಶೀಲ್ದಾರ್ ರವರು ಪೋಲೀಸರ ಸಹಾಯದಿಂದ ಚೆಕ್ ಮಾಡಲಾಗಿ ಸದರಿ ಲಾರಿಯಲ್ಲಿದ್ದ ಆಹಾರ ಧಾನ್ಯಗಳನ್ನು ಭಟ್ಕಳ್ ಟಿಎಪಿಸಿಎಂಎಸ್‌ಗೆ ತೆಗೆದುಕೊಂಡು ಹೋಗುವ ಬದಲಾಗಿ ಮಂಗಳೂರು ಕಡೆ ಅಕ್ರಮವಾಗಿ ಸಾಗಿಸುತ್ತಿದ್ದರಿಂದ ಕಾಪೂ ಪೋಲೀಸ್ ಠಾಣೆಯಲ್ಲಿ ಈ ಬಗ್ಗೆ ಕ್ರೈಂ ನಂ.180/2010 ರಲ್ಲಿ ಪ್ರಕರಣ ದಾಖಲಾಗಿ ಲಾರಿ ಸಮೇತ ಅದರಲ್ಲಿದ್ದ ಆಹಾರ ಧಾನ್ಯಗಳನ್ನು ಸೀಜ್ ಮಾಡಲಾಗಿರುತ್ತದೆ ಎನ್ನುವುದು ದೂರುದಾರರಿಗೆ ಖಚಿತವಾಗಿದ್ದರಿಂದ ಅದನ್ನು ದೃಢಪಡಿಸಿಕೊಳ್ಳಲು ದೂರುದಾರರು ಕಾಪೂ ಪೋಲೀಸ್ ಠಾಣೆಯಲ್ಲಿ ಈ ಬಗ್ಗೆ ವಿವರವಾದ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದಾಗ ಕಾಪೂ ಠಾಣೆ ಪೋಲೀಸರು ಪ್ರಥಮ ವರ್ತಮಾನದ ವರದಿಯನ್ನು ನೀಡಿರುತ್ತಾರೆ. ತದನಂತರ ದೂರುದಾರರು ಆಹಾರ ನಿಗಮದ ಪೆರಂಪಳ್ಳಿ ಶಾಖೆಗೆ ಮೇಲೆ ಹೇಳಲಾದ ಲಾರಿಯಲ್ಲಿ ಆಹಾರ ಧಾನ್ಯಗಳನ್ನು ಎಲ್ಲಿಗೆ, ಯಾವ ಸಮಯಕ್ಕೆ ಕಳುಹಿಸಲಾಗಿದೆ ಎಂಬ ಮಾಹಿತಿಯನ್ನು ಕೋರಿ ದಾಖಲೆಗಳನ್ನು ಒದಗಿಸುವಂತೆ ಕೇಳಿಕೊಂಡಿದ್ದು, ಆಹಾರ ನಿಗಮದ ಅಧಿಕಾರಿಗಳು ಮಾಹಿತಿ ನೀಡಿ ದಾಖಲೆಗಳನ್ನು

ಒದಗಿಸಿದ್ದು, ಅದು ನಿಶಾನೆ ಪಿ-5 ರಲ್ಲಿ ಗುರುತಿಸಿಕೊಳ್ಳಲಾದ ಆಹಾರ ನಿಗಮದವರು ಒದಗಿಸಿರುವ 14 ಪುಟಗಳ ಮಾಹಿತಿಯಾಗಿರುತ್ತದೆ. ಸದರಿ ಮಾಹಿತಿಯನ್ನು ದೂರುದಾರರು ಪಡೆದುಕೊಂಡ ನಂತರ ಹೊನ್ನಾವರ ಕೃಷಿ ಹುಟ್ಟುವಳಿ ಸಹಕಾರಿ ಮಾರಾಟ ಸಂಘಕ್ಕೆ ಅರ್ಜಿ ಸಲ್ಲಿಸಿ ಮೇಲೆ ಹೇಳಲಾದ ಲಾರಿಯಲ್ಲಿದ್ದ ಆಹಾರ ಧಾನ್ಯಗಳು ಸ್ವೀಕೃತವಾದ ಬಗ್ಗೆ ಮಾಹಿತಿಯನ್ನು ಕೋರಿಕೊಂಡಿದ್ದು, ಅವರು ದೂರುದಾರರಿಗೆ ಮಾಹಿತಿ ನೀಡಿರುತ್ತಾರೆ. ದೂರುದಾರರು ಸದರಿ ದಾಖಲೆಗಳನ್ನು ಪರಿಶೀಲಿಸಿದ್ದು, ಒಂದೇ ಸಂಖ್ಯೆಯ ಲಾರಿಯು ಆಹಾರ ನಿಗಮದ ಪೆರಂಪಳ್ಳಿಯಿಂದ ಲೋಡಾಗಿ ಗೇಟ್ ರಿಜಿಸ್ಟರ್ ಪ್ರಕಾರ ದಿನಾಂಕ : 9/8/2010 ರಂದು ಸಂಜೆ 5-15 ಕ್ಕೆ ಬಿಟ್ಟಿದ್ದು, ಅದೇ ದಿನ ಸಂಜೆ 5-40 ಕ್ಕೆ ಕಾಪೂ ಪೋಲೀಸ್ ಠಾಣೆಯಲ್ಲಿ ಜಪ್ತಾಗಿದ್ದು ಹಾಗೂ ಸದರಿ ಲಾರಿ ದಾಖಲೆಗಳ ಪ್ರಕಾರ ಭಟ್ಕಳ್ ಕಡೆಗೆ ಹೋಗಬೇಕಾಗಿದ್ದು, ಅದರ ಬದಲಾಗಿ ಮಂಗಳೂರು ಮಾರ್ಗವಾಗಿ ಹೊರಟಾಗ ಪೋಲೀಸರಿಂದ ಅಕ್ರಮ ಸಾಗಾಣಿಕೆ ಎಂದು ಜಪ್ತು ಮಾಡಿದ್ದು, ಇದರ ಮೇಲಿಂದ ದೂರುದಾರರಿಗೆ ಅದು ಅಕ್ರಮ ಸಾಗಾಣಿಕೆ ಅನ್ನುವುದು ಖಚಿತವಾಗಿದ್ದರಿಂದ ಇದಕ್ಕೆ ಯಾರು ಹೊಣೆಗಾರರು ಎನ್ನುವ ಬಗ್ಗೆ ತನಿಖೆ ಆಗುವಂತೆ ಮಾನ್ಯ ಲೋಕಾಯುಕ್ತದಲ್ಲಿ ದೂರುದಾರರು ನಿಶಾನೆ ಪಿ-2 ರಂತೆ ದೂರನ್ನು ಸಲ್ಲಿಸಿರುತ್ತಾರೆ.

57. ಮೇಲೆ ಹೇಳಿದ ಅಕ್ರಮ ಸಾಗಾಣಿಕೆ ಕುರಿತಂತೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಮಾನ್ಯ ಉಪಲೋಕಾಯುಕ್ತರವರು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಾರವಾರ ಇವರಿಗೆ ವಹಿಸಿದ್ದು, ಸದರಿಯವರು ಪೋಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಾರವಾರ ರವರಿಗೆ ಪ್ರಕರಣವನ್ನು ತನಿಖೆಗಾಗಿ ವಹಿಸಿದ್ದು, ಸದರಿಯವರು ವಿವರವಾದ ತನಿಖೆಯನ್ನು ಮಾಡಿ ತಮ್ಮ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಪ್ರಕರಣದ ತನಿಖಾಧಿಕಾರಿಯಾದ ಪೋಲೀಸ್ ಉಪಾಧೀಕ್ಷಕರಾದ ಶ್ರೀಮತಿ. ಉಮಾ ಪ್ರಶಾಂತ್ ರವರನ್ನು ಸಾಕ್ಷಿ-2 ಆಗಿ ವಿಚಾರಣೆ ಮಾಡಲಾಗಿದ್ದು, ಅವರು ತಮ್ಮ ತನಿಖಾ ವರದಿಯನ್ನು ಗುರುತಿಸಿದ್ದು,

ನಿಶಾನೆ ಪಿ-9 ಆಗಿದೆ. ಸದರಿ ಸಾಕ್ಷಿದಾರರು ತಮ್ಮ ವಿಚಾರಣಾ ಕಾಲಕ್ಕೆ ತಾವು ಪ್ರಕರಣದ ತನಿಖೆಗೆ ವಹಿಸಿಕೊಂಡ ನಂತರ ದಿನಾಂಕ : 23/2/2015 ರಂದು ಹೊನ್ನಾವರ ಕೃಷಿ ಹುಟ್ಟುವಳಿ ಸಹಕಾರಿ ಸಂಘಕ್ಕೆ ಭೇಟಿ ಕೊಟ್ಟು ಮಾಹಿತಿ ಸಂಗ್ರಹಿಸಿ ಗೋಡೋನ್ ರಿಜಿಸ್ಟರ್‌ನ್ನು ಪರಿಶೀಲಿಸಿದಾಗ ದಿನಾಂಕ : 9/8/2010 ರಂದು ಪೆರಂಪಳ್ಳಿ ಎಫ್.ಸಿ.ಐ ಗೋಡೋನ್ ನಿಂದ ಲಾರಿ ಸಂಖ್ಯೆ: ಕೆಎ-19/1699 ನೇದ್ದರಿಂದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಆಗಿ ಗೋಡೋನ್ ಕೀಪರ್ ಆದ ನಾಗಪ್ಪ ವೆಂಕಟಪ್ಪ ನಾಯಕ್ ಇವರು ಸ್ವೀಕರಿಸಿಕೊಂಡಿರುವ ಬಗ್ಗೆ ನಮೂದಿಸಿರುವುದು ಕಂಡುಬಂದಿರುತ್ತದೆ ಹಾಗೂ ರಿಜಿಸ್ಟರ್‌ನಲ್ಲಿ ತಿದ್ದುಪಡಿ ಸಹ ಮಾಡಿರುವುದು ಕಂಡುಬಂದಿರುತ್ತದೆ. ನಂತರ ಸದರಿ ಸಂಸ್ಥೆಯ ಸ್ಟಾಕ್ ರಿಜಿಸ್ಟರ್‌ನ್ನು ಪರಿಶೀಲಿಸಿದಾಗ ಅಂದಿನ ಶಾಖಾ ವ್ಯವಸ್ಥಾಪಕರಾದ ಎಂ.ಹೆಚ್. ಗೌಡ ಇವರು ಈ ಮೇಲೆ ಹೇಳಿದ ಆಹಾರ ಧಾನ್ಯಗಳನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ತಮ್ಮ ಸ್ಟಾಕ್ ರಿಜಿಸ್ಟರ್ ನಲ್ಲಿ ನಮೂದಿಸಿರುವುದು ಕಂಡುಬಂದಿರುತ್ತದೆ, ಮೇಲೆ ಹೇಳಿದ ಗೋಡೋನ್ ಕೀಪರ್ ನಾಗಪ್ಪ ನಾಯಕ್ ಇವರು ಹಾಲಿ ಭಟ್ಕಳ್ ರೀಟೆಲ್ ಸೆಕ್ಷನ್ ಅಂಗಡಿ ಸಂಖ್ಯೆ: 28, 29 ಮತ್ತು 31 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಕಂಡುಬರುತ್ತದೆ. ಸದರಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ, ಟಿ.ಎ.ಪಿ.ಸಿ.ಎಂ.ಎಸ್. ಹೊನ್ನಾವರ ಇವರು ಭಟ್ಕಳ್ ಶಾಖಾ ವ್ಯವಸ್ಥಾಪಕರಾದ ಶ್ರೀ. ಎಂ. ಹೆಚ್. ಗೌಡ ಇವರ ಮೇಲೆ ಮಾತ್ರ ಸೂಕ್ತ ಕ್ರಮ ಕೈಗೊಂಡು ವಿಚಾರಣಾಧಿಕಾರಿಯಾಗಿ ಶ್ರೀ ಹೆಚ್. ವಿ ನಾಯಕ್ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿವೃತ್ತ), ಹೊನ್ನಾವರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಅವರ ವಿಚಾರಣಾ ವರದಿಯ ಮೇಲೆ ಶ್ರೀ ಎಂ.ಹೆಚ್. ಗೌಡ ಇವರನ್ನು ಕಡ್ಡಾಯ ನಿವೃತ್ತಿಗೆ ಕಳುಹಿಸಿರುವ ಬಗ್ಗೆ ತಿಳಿದುಬಂದಿದ್ದು, ಆದರೆ ಗೋಡೋನ್ ಕೀಪರ್ ಶ್ರೀ ನಾಗಪ್ಪ ನಾಯಕ್ ಇವರ ಮೇಲೆ ಯಾವುದೇ ಕ್ರಮ ಕೈಗೊಂಡಿದ್ದು ಕಂಡುಬಂದಿರುವುದಿಲ್ಲ ಎಂದು ಸಾಕ್ಷಿದಾರರು ನುಡಿದಿರುತ್ತಾರೆ ಹಾಗೂ ಸದರಿ ವಿಚಾರಣಾ ವರದಿಯನ್ನು ನಿಶಾನೆ ಪಿ-10 ದಾಖಲೆಯೆಂದು ಗುರುತಿಸಿರುತ್ತಾರೆ.

58. ತನಿಖಾಧಿಕಾರಿ ಸಾಕ್ಷಿ-2 ರವರು ಮುಂದುವರೆದು ಮೇಲೆ ಹೇಳಲಾದ ಆಹಾರ ಧಾನ್ಯಗಳು ಭಟ್ಕಳ್ ಶಾಖೆಯಲ್ಲಿ ಸ್ವೀಕೃತಗೊಂಡಿರುವ ಬಗ್ಗೆ ಆಗಿ ಭಟ್ಕಳ್ ತಾಲ್ಲೂಕು ಆಹಾರ ನಿರೀಕ್ಷಕರಾದ ಕೆ.ವಿ ಶಂಕರಪ್ಪ ಹಾಗೂ ಶಿರಸ್ತೇದಾರ್ ಶ್ರೀ. ಎಂ.ಎಲ್. ನಾಯಕ್ ಇವರು ದಿನಾಂಕ : 9/8/2010 ರಂದು ಸ್ಟಾಕ್ ರಿಜಿಸ್ಟರ್‌ದಲ್ಲಿ ದೃಢೀಕರಿಸಿರುತ್ತಾರೆ. ದಿನಾಂಕ : 9/8/2010 ರಂದು ಲಾರಿ ಸಂಖ್ಯೆ: ಕೆ.ಎ. 19/1699 ನೇದ್ದು ಉಡುಪಿ ಜಿಲ್ಲೆಯ ಪೆರಂಪಳ್ಳಿಯ ಎಫ್.ಸಿ.ಐ ಗೋಡೋನ್ ನಿಂದ ಸಾಯಂಕಾಲ 5-15 ಗಂಟೆಗೆ ನಿರ್ಗಮಿಸಿದ್ದು, ಅದೇ ದಿನ ಸಂಜೆ 5-40 ಗಂಟೆಗೆ ಸದರಿ ವಾಹನವನ್ನು ಆಹಾರ ಧಾನ್ಯಗಳ ಸಮೇತ ಕಾಪೂ ಪೋಲೀಸರು ಹಾಗೂ ಉಡುಪಿ ಕಂದಾಯ ಇಲಾಖೆಯ ಅಧಿಕಾರಿಗಳು ಜಪ್ತು ಮಾಡಿ ಕಾಪೂ ಪೋಲೀಸ್ ಠಾಣೆ ಸಂಖ್ಯೆ : 180/2010 ರಲ್ಲಿ ಪ್ರಕರಣ ದಾಖಲಿಸಿ ಜಪ್ತು ಪಡಿಸಿಕೊಂಡು ಲಾರಿ ಹಾಗೂ ಅದರಲ್ಲಿರುವ ಆಹಾರ ಧಾನ್ಯಗಳನ್ನು ಹಸ್ತಾಂತರಿಸಿದ್ದು, ಆ ಕಾರಣದಿಂದ ಸದರಿ ವಾಹನವು ದಿನಾಂಕ : 9/8/2010 ರಂದು ಭಟ್ಕಳಕ್ಕೆ ಬರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕಾರಣ ಸದರಿ ಅವ್ಯವಹಾರದಲ್ಲಿ ಮೇಲೆ ಹೇಳಿದ ಶ್ರೀ. ಕೆ.ವಿ ಶಂಕರಪ್ಪ ಮತ್ತು ಶ್ರೀ. ಎಂ.ಎಲ್ ನಾಯಕ್ ಇವರು ಸಹ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿಸಿರುವುದು ಕಂಡುಬರುತ್ತದೆ ಎಂದು ನುಡಿದು ಗೋಡೋನ್ ರಿಜಿಸ್ಟರ್‌ದ ಪ್ರತಿಯನ್ನು ನಿಶಾನೆ ಪಿ-11 ಎಂದು ಗುರುತಿಸಿಕೊಂಡಿರುತ್ತಾರೆ.

59. ತನಿಖಾಧಿಕಾರಿಗಳು ಮುಂದುವರೆದು ಸದರಿ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಉಪ ನಿರ್ದೇಶಕರು ಕಛೇರಿ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕಾರವಾರ ಕಚೇರಿಗೆ ಭೇಟಿ ನೀಡಿ ಅಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ 9/8/2010 ರಂದು ಲಾರಿ ಸಂಖ್ಯೆ: ಕೆಎ-19/1669 ನೇದ್ದರಿಂದ 82 ಚೀಲ ಅಕ್ಕಿ ಹಾಗೂ 186 ಚೀಲ ಗೋಧಿಯನ್ನು ಟಿಎಪಿಸಿಎಂಎಸ್ ಲಿ ಹೊನ್ನಾವರ ಶಾಖೆ, ಭಟ್ಕಳ್‌ದಲ್ಲಿ ಸ್ವೀಕರಿಸಿ ಆ ಬಗ್ಗೆ ಟಿಎಪಿಸಿಎಂಎಸ್ ಲಿ ಹೊನ್ನಾವರ ಶಾಖೆ, ಭಟ್ಕಳ್ ರವರಿಗೆ ಸರ್ಕಾರದಿಂದ ಸಬ್ಸಿಡಿ

ಬಿಲ್ಲುಗಳನ್ನು ಮಂಜೂರು ಮಾಡಿರುವುದು ಕಂಡುಬರುತ್ತದೆ ಹಾಗೂ ಸದರಿ ಬಿಲ್ಲುಗಳ ಮಂಜೂರಿಗಾಗಿ ಆಗಿನ ಭಟ್ಕಳ್ ತಾಲ್ಲೂಕು ತಹಶೀಲ್ದಾರ್ ಆದ ಆ.ಸ.ನೌ ಜಿ.ಎಂ ಬೋರ್ಕರ್ ಹಾಗೂ ಇ.ಓ, ತಾಲ್ಲೂಕು ಪಂಚಾಯತಿ, ಭಟ್ಕಳ್ ರವರು ಅನುಮೋದಿಸಿರುವುದು ಕಂಡುಬಂದಿರುತ್ತದೆ ಎಂದು ನುಡಿದಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ತನಿಖೆಯ ಮೇಲಿನ ಸದರಿ ಪ್ರಕರಣದಲ್ಲಿ ಮೇಲೆ ಹೇಳಿದ ಆಹಾರ ಧಾನ್ಯಗಳು ದಿನಾಂಕ : 9/8/2010 ರಂದು ಟಿಎಪಿಸಿಎಂಎಸ್ ಆ ಹೊನ್ನಾವರ ಶಾಖೆ, ಭಟ್ಕಳ್‌ಕ್ಕೆ ಸ್ವೀಕೃತಗೊಳ್ಳದೇ ಇದ್ದರೂ ಹಾಗೂ ಈ ವಿಷಯ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದರೂ ಸಹ ಜವಬ್ದಾರಿಯುತ ಅಧಿಕಾರಿಯಾದ ಆ.ಸ.ನೌ ರವರು ಸಬ್ಸಿಡಿ ಬಿಲ್ಲುಗಳ ಪಾವತಿಗಾಗಿ ತಮ್ಮ ಮೇಲಾಧಿಕಾರಿಗಳಿಗೆ ಅನುಮೋದನೆ ಮಾಡಿರುವುದು ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಬಗ್ಗೆ ಹಾಗೂ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿಸಿರುವ ಬಗ್ಗೆ ಕಂಡುಬರುತ್ತದೆ ಎಂದು ನುಡಿದು ಆಹಾರ ಧಾನ್ಯಗಳ ಸಬ್ಸಿಡಿ ಬಿಲ್ಲುಗಳ ಪಾವತಿಸಿರುವ ಬಗ್ಗೆ ಇರುವ ತಾವು ಸಂಗ್ರಹಿಸಿದ ದಾಖಲೆಗಳು ನಿಶಾನೆ ಪಿ–12 ದಾಖಲೆಗಳಾಗಿವೆ ಎಂದು ನುಡಿದಿರುತ್ತಾರೆ.

60. ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿ–1 ದೂರುದಾರರ ಹೇಳಿಕೆ ಮೇಲಿಂದ ಹಾಗೂ ಪ್ರಕರಣದ ತನಿಖಾಧಿಕಾರಿಯಾದ ಸಾಕ್ಷಿ–2 ರವರ ಹೇಳಿಕೆ ಮೇಲಿಂದ ಹಾಗೂ ಪ್ರಕರಣದಲ್ಲಿ ಗುರುತಿಸಿಕೊಳ್ಳಲಾಗಿರುವ ನಿಶಾನೆ ಪಿ–1 ರಿಂದ 12 ರ ದಾಖಲೆಗಳಿಂದ ಆ.ಸ.ನೌ ರವರ ಮೇಲೆ ಮಾಡಲಾದ ಆಪಾದನೆಗಳನ್ನು ಶಿಸ್ತು ಪ್ರಾಧಿಕಾರವು ಈ ಕೆಳಕಂಡ ಅಂಶಗಳಿಂದ ರುಜುವಾತುಪಡಿಸಿದೆ ಎನ್ನುವುದು ಸ್ಪಷ್ಟವಾಗುತ್ತದೆ.

1) ದೂರುದಾರರು ಹಾಜರುಪಡಿಸಿ ಗುರುತಿಸಿಕೊಂಡಿರುವ ನಿಶಾನೆ ಪಿ–5 ದಾಖಲೆ ಮೇಲಿಂದ ದಿನಾಂಕ : 9/8/2010 ರಂದು ಸಾಯಂಕಾಲ 5–15 ಗಂಟೆಗೆ ಪೆರಂಪಳ್ಳಿಯ ಎಫ್.ಸಿ.ಐ ಗೋಡೋನ್ ನಿಂದ ಭಟ್ಕಳದ ಟಿಎಪಿಸಿಎಂಎಸ್‌ಕ್ಕೆ ಸಾರ್ವಜನಿಕರ ಪಡಿತರಕ್ಕೆ ವಿತರಿಸುವುದಕ್ಕಾಗಿ

ಸಾಗಿಸಬೇಕಾದ 82 ಚೀಲ ಅಕ್ಕಿ, 186 ಚೀಲ ಗೋಧಿ ಲಾರಿ ಸಂಖ್ಯೆ.ಕೆಎ-19/1669 ಲೋಡಾಗಿ ಬಿಟ್ಟಿರುವುದು ಸ್ಪಷ್ಟವಾಗುತ್ತದೆ.

2) ಈ ಮೇಲೆ ಹೇಳಲಾದ ಆಹಾರ ಧಾನ್ಯಗಳು ಮೇಲೆ ಹೇಳಿದ ಲಾರಿಯಲ್ಲಿ ಸಾಗಾಟ ಮಾಡುತ್ತಿದ್ದಾಗ ಕಾಪೂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಿನಾಂಕ : 9/8/2010 ರಂದೇ ಸಂಜೆ 5-40ಕ್ಕೆ ತಪಾಸಿಸಲ್ಪಟ್ಟು ಅದು ಅಕ್ರಮ ಸಾಗಾಣಿಕೆ ಎಂದು ಕಾಪೂ ಪೊಲೀಸ್ ಠಾಣಾ ಕ್ರೈಂ ನಂ.180/2010 ರಲ್ಲಿ ಪ್ರಕರಣ ದಾಖಲಾಗಿ ಈ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಗೊಂಡಿರುವುದು ನಿಶಾನೆ ಪಿ-1 ದಾಖಲೆಯಿಂದ ಹಾಗೂ ಕಾಪೂ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ದಿನಾಂಕ : 25/7/2011 ರಂದು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ ರವರಿಗೆ ಸಲ್ಲಿಸಿದ ವರದಿಯಿಂದ ಖಚಿತವಾಗಿದೆ.

3) ಈ ಮೇಲೆ ಹೇಳಲಾದ ಆಹಾರ ಧಾನ್ಯಗಳು ಮೇಲೆ ಹೇಳಿದ ಲಾರಿಯಲ್ಲಿ ದಿನಾಂಕ : 9/8/2010 ರಂದು ಸಾಗಾಣಿಕೆಯಾಗಿ ಟಿಎಪಿಸಿಎಂಎಸ್ ಲಿಮಿಟೆಡ್, ಹೊನ್ನಾವರ ಶಾಖೆ, ಭಟ್ಕಳಕ್ಕೆ ಸ್ವೀಕೃತಗೊಳ್ಳದೇ ಇದ್ದರೂ ಸದರಿ ಆಹಾರ ಧಾನ್ಯಗಳು ಮೇಲೆ ಹೇಳಿದ ಲಾರಿ ಮುಖಾಂತರ ಸ್ವೀಕೃತಗೊಂಡಿವೆ ಎಂದು ಸುಳ್ಳು ದಾಖಲಿಸಿರುವುದು ನಿಶಾನೆ ಪಿ-11 ರಲ್ಲಿಯ ಟಿಎಪಿಎಂಎಸ್‌ಲಿ, ಹೊನ್ನಾವರ ಶಾಖೆ, ಭಟ್ಕಳದಲ್ಲಿನ ಸ್ಟಾಕ್ ಬುಕ್ ಹಾಗೂ ಗೋಡೋನ್ ರಿಜಿಸ್ಟರ್‌ದ ಪ್ರತಿಗಳ ಪಟ್ಟಿಗಳ ಮೇಲಿಂದ ಹಾಗೂ ಶಾಖಾ ವ್ಯವಸ್ಥಾಪಕರು, ಟಿಎಪಿಸಿಎಂಎಸ್ ಲಿ, ಹೊನ್ನಾವರ ಶಾಖೆ, ಭಟ್ಕಳ್ ರವರು ದಿನಾಂಕ : 28/8/2021 ರಂದು ಮಾನ್ಯ ಅಪರ ನಿಬಂಧಕರು, ವಿಚಾರಣೆ, ಕರ್ನಾಟಕ ಲೋಕಾಯುಕ್ತ ಇವರಿಗೆ ಮಾಡಿದ ವರದಿ ನಿಶಾನೆ

ಪಿ-7 ರ ಮೇಲಿಂದ ರುಜುವಾತಾಗಿದೆ ಹಾಗೂ ಸದರಿ ದಾಖಲೆಗಳಲ್ಲಿ ಆಹಾರ ನಿರೀಕ್ಷಕರು ಮತ್ತು ಆಹಾರ ಶಿರಸ್ತೇದಾರ್ ರವರು ಸುಳ್ಳಾಗಿ ದೃಢೀಕರಿಸಿರುವುದು ಸಹ ಸ್ಪಷ್ಟವಾಗುತ್ತದೆ. ಅದೂ ಅಲ್ಲದೇ ಸದರಿ ಖೊಟ್ಟಿ ದಾಖಲೆ ಮೇಲಿಂದ ಸರ್ಕಾರದಿಂದ ಸಬ್ಸಿಡಿ ಬಿಲ್ಲುಗಳನ್ನು ಮಂಜೂರು ಮಾಡಿರುವುದು ಮತ್ತು ಸದರಿ ಬಿಲ್ಲುಗಳ ಮಂಜೂರಿಗಾಗಿ ತಾಲ್ಲೂಕು ತಹಶೀಲ್ದಾರ್ ಆದ ಆ.ಸ.ನೌ ರವರು ಅನುಮೋದಿಸಿರುವುದು ಸ್ಪಷ್ಟವಾಗುತ್ತದೆ.

4) ದಿನಾಂಕ : 9/8/2010 ರಂದು ಶ್ರೀ. ಎಂ. ಹೆಚ್ ಗೌಡ ಶಾಖಾ ವ್ಯವಸ್ಥಾಪಕರು, ಟಿಎಪಿಸಿಎಂಎಸ್, ಹೊನ್ನಾವರ ಶಾಖೆ, ಭಟ್ಕಳದಲ್ಲಿ ಮೇಲೆ ಹೇಳಿದ ಅಕ್ಕಿ ಮತ್ತು ಗೋಧಿ ದಾಸ್ತಾನಿನ ಬಗ್ಗೆ ಸ್ಟಾಕ್ ರಿಜಿಸ್ಟರ್‌ನಲ್ಲಿ ಸುಳ್ಳು ಮಾಹಿತಿ ದಾಖಲಿಸಿಕೊಂಡಿರುವ ಆಪಾದನೆ ಕುರಿತಂತೆ ಶ್ರೀ. ಹೆಚ್.ವಿ ನಾಯಕ್, ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಹೊನ್ನಾವರ ಇವರು ಇಲಾಖಾ ವಿಚಾರಣೆಯನ್ನು ಕೈಗೊಂಡು ಆಪಾದನೆ ರುಜುವಾತಾಗಿದೆ ಎಂದು ತೀರ್ಮಾನಿಸಿ ಕಡ್ಡಾಯ ನಿವೃತ್ತಿಗೆ ಕಳುಹಿಸಿರುವುದು ನಿಶಾನೆ ಪಿ-10 ರ ವಿಚಾರಣಾ ವರದಿ ಮೇಲಿಂದ ರುಜುವಾತಾಗಿರುತ್ತದೆ.

5) ನಿಶಾನೆ ಪಿ-12 ರ ದಾಖಲೆಗಳಲ್ಲಿ ಆ.ಸ.ನೌ ರವರು ಸರ್ಕಾರದಿಂದ ಸಬ್ಸಿಡಿ ಬಿಲ್ಲುಗಳನ್ನು ಮಂಜೂರಿಗಾಗಿ ಅನುಮೋದಿಸಿರುವುದು ಮತ್ತು ಸದರಿ ಅನುಮೋದನೆಯಿಂದ ಆಹಾರ ಧಾನ್ಯಗಳ ಸಬ್ಸಿಡಿ ಬಿಲ್ಲುಗಳನ್ನು ಪಾವತಿಸಿರುವುದು ಕಂಡುಬರುತ್ತದೆ.

61. ತನಿಖಾಧಿಕಾರಿಗಳು ಸಮಗ್ರ ತನಿಖೆ ಮಾಡಿ ಸಂಬಂಧಪಟ್ಟ ದಾಖಲೆಗಳನ್ನು ಸಹ ಸಂಗ್ರಹಿಸಿ ಆ.ಸ.ನೌ ರವರು ಮೇಲೆ ಹೇಳಿದ ಅವ್ಯವಹಾರದಲ್ಲಿ ಭಾಗಿ ಆಗಿರುವ ಬಗ್ಗೆ ಮತ್ತು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ತೋರಿಸಿರುವ ಬಗ್ಗೆ ಕಂಡುಬಂದಿರುತ್ತದೆ ಎಂದು ತಮ್ಮ ವರದಿ ನಿಶಾನೆ ಪಿ–9 ರಲ್ಲಿ ವಿವರಿಸಿರುತ್ತಾರೆ.

62. ಈ ಮೇಲೆ ವಿವರಿಸಿದ ಕಾರಣಗಳಿಂದ ಆ.ಸ.ನೌ ರವರು ಸದರಿ ಪ್ರಕರಣದಲ್ಲಿ ಮೇಲೆ ಹೇಳಿದ ಆಹಾರ ಧಾನ್ಯಗಳು ದಿನಾಂಕ : 9/8/2010 ರಂದು ಟಿಎಪಿಸಿಎಂಎಸ್ ಲಿ, ಹೊನ್ನಾವರ ಶಾಖೆ, ಭಟ್ಕಳಕ್ಕೆ ಸ್ವೀಕೃತಗೊಳ್ಳದೇ ಇದ್ದರೂ ಜವಬ್ದಾರಿಯುತ ಅಧಿಕಾರಿಯಾಗಿ ಸಬ್ಸಿಡಿ ಬಿಲ್ಲುಗಳ ಪಾವತಿಗಾಗಿ ತಮ್ಮ ಮೇಲಾಧಿಕಾರಿಗಳಿಗೆ ಅನುಮೋದನೆ ಮಾಡಿರುವುದು ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಬಗ್ಗೆ ಹಾಗೂ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿಸಿ ದುರ್ನಡತೆ ಎಸಗಿರುವುದು ರುಜುವಾತಾಗಿದ್ದು, ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರಡಿಯಲ್ಲಿ, ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ–1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಲಾಗಿದೆ.**

## <u>ವಿಚಾರಣಾ ವರದಿ</u>

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಜಿ.ಎಂ. ಬೋರ್ಕರ್, ತಹಶೀಲ್ದಾರ್ ಗ್ರೇಡ್–1, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ (ಹಿಂದಿನ ತಹಶೀಲ್ದಾರ್, ಭಟ್ಕಳ

ತಾಲ್ಲೂಕು) ರವರ ವಿರುದ್ಧ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಿದೆ.

ಆ.ಸ.ನೌ ರವರ ನಿವೃತ್ತಿ ದಿನಾಂಕ: 30/06/2018.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

30/6

**(ಶೋಭಾ ಎಸ್)**
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| | |
|---|---|
| **File 3** | **Witness examined on behalf of the Disciplinary Authority** |
| | **PW-1**: Sri. Gopalashastri (Original) |
| | **PW-2:** Smt. Uma Prashanth (Original) |
| | **Witness examined on behalf of the Defence** |
| | **NIL** |
| **File 4** | **Documents marked on behalf of the Disciplinary Authority** |
| | **Ex. P-1**: Paper cutting complaint (xerox) |
| | **Ex.P-2:** Complaint (Xerox)<br>**Ex.P-2(a):** Signature of the complainant |
| | **Ex.P-3:** Form No-I (Xerox)<br>**Ex.P-3(a):** Signature of the complainant |
| | **Ex.P-4:** Form No-II (Xerox)<br>**Ex.P-4(a):** Signature of the complainant |
| | **Ex.P-5:** The Food Corporation of India District Office, Shimoga letter dated: 03/11/2010 addressed to Sri. P. Gopal Shastry (Xerox) |
| | **Ex.P-6:** The letter of Gopal Shastry P to Hon'ble Santhosh Hegade, Lokayukta, Bengaluru (Xerox)<br>**Ex.P-6**: Signature of the complainant |
| | **Ex.P-7:** The Honnavar Agricultureal Produce Co-operative Marketing Society Limited, Honnavar letter dated: 28/03/2011 addressed to Additional Registrar, Karnataka Lokayukta, Bengaluru (Xerox) |
| | **Ex.P-8:** Rejoinder of the complainant and connected documents (Xerox)<br>**Ex.P-8(a):** Signature of the complainant |

| | |
|---|---|
| | **Ex.P-9:** The Deputy Superintendent of Police, Karnataka Lokayukta, Karawara addressed to Superintendent of Police, Karnataka Lokayukta, Bengaluru dated: 31/03/2015 (Xerox)<br>**Ex.P-9(a):** Signature of the Dy.S.P |
| | **Ex.P-10:** Enquiry report of Section Manager, T.A.P.C.M.S.limited Honnavara (Xerox ) |
| | **Ex.P-11:** Stock Book of Agriculture Co-operative Society, Honnavara, page no. 233 certified copy, page no. 234 xerox copy, page no. 235 certified copy, page no.236 xerox copy, page no. 237 certified copy, page no. 238 certified copy, page no.239 certified copy, page no. 240 xerox copy, page no. 241 certified copy, page no. 242 -244 xerox copies, page no. 246 certified copy. |
| | **Ex.P-12:** Note sheet of Sri. K. Amaranarayana, Deputy Director, Uttara Kannada, Karawara, page no. 247-257 certified copy, page no. 258 true copy, page no. 273 certified copies, page no. 274-277 xerox copies. |
| | **Documents marked on behalf of the DGO** |
| | **Nil** |

**Dated this the 30th day of June 2022**

30/6

**(Shobha. S)**
Additional Registrar Enquiries-13
Karnataka Lokayukta
Bangalore.